9

# ದಾವೀದನು ತನ್ನ ಜೀವನವನ್ನು ಅವ್ಯವಸ್ಥೆ ಮಾಡಿಕೊಂಡಾಗ ಅವನಿಗೆ ಅವಶ್ಯವಾದ ಸಂಗತಿ ಏನು

## (2 ಸಮುವೇಲ 11; 12)

ದಾವೀದನು ಪಡೆದ ಯಶಸ್ಸಿನ ಬಗ್ಗೆ ಧ್ಯಾನಿಸುತ್ತ ಮುಂದುವರೆದಿದ್ದೇವೆ, ಆದರೆ ಈಗ ನಾವು ನಮ್ಮ ಚಲನ ಗತಿಯನ್ನು ಬದಲಾಯಿಸೋಣ. ಈ ಪಾಠವು ದಾವೀದನ ಯಶಸ್ಸಿನ ಕುರಿತಾಗಿರದೆ, ಅವನ ಅಘಾತದ ಕುರಿತಾಗಿರುತ್ತದೆ; ಅವನ ಯಶಸ್ಸಿನ ಮಹಿಮೆಯ ಕುರಿತಾಗಿರದೆ, ಅವನ ಜೀವಿತದ ಕತ್ತಲೆಯ ದಿನಗಳ ಕುರಿತಾಗಿರುತ್ತದೆ. ನಾನು ಘಟನೆಯವನ್ನು "ದಾವೀದನು ತನ್ನ ಜೀವನವನ್ನು ಅವ್ಯವಸ್ಥೆ ಮಾಡಿಕೊಂಡಾಗ ಅವನಿಗೆ ಅವಶ್ಯವಾದ ಸಂಗತಿ ಏನು ಎಂಬುದಾಗಿ ಪ್ರಾಯೋಜಿಸುತ್ತಿದ್ದೇನೆ."[1] ಇದು ಆಸಕ್ತಿಕರವಾದ ತಲೆಬರಹವಲ್ಲ, ಆದರೆ ನಾವು ಇದರೊಂದಿಗೆ ನಮ್ಮನ್ನು ಹೋಲಿಸಿಕೊಳ್ಳಬಹುದು.

### ದಾವೀದನ ಜೀವಿತ ದೊಡ್ಡ ಪ್ರಮಾಣದ ಸಂಕಷ್ಟದಲ್ಲಿ ಸಿಲುಕಿಕೊಂಡಿತ್ತು (2 ಸಮುವೇಲ 11)

ದಾವೀದನ ಸಂಕಷ್ಟದ ವಿಷಯವನ್ನು ನಾನು ನಿಮಗೆ ಮನವರಿಕೆಮಾಡಿ ಕೊಡುವ ಅವಶ್ಯವಿಲ್ಲ. ಈ ಕಥೆಯನ್ನು ನೀವು ಚನ್ನಾಗಿ ಅರಿತವರಾಗಿದ್ದೀರಿ.

#### ಪಾಪ

ದಾವೀದನು ಅಮ್ಮೋನಿಯರಿಗೂ ಸಿರಿಯನ್ನರಿಗೂ ವಿರೋಧವಾಗಿ ಯುದ್ಧ ಮಾಡುತ್ತಿದ್ದನು. ಸಿರಿಯನ್ನರು ಸೋಲನ್ನು ಅನುಭವಿಸಿದ್ದರು, ಮತ್ತು ಅಮ್ಮೋನಿಯರನ್ನು ರಬ್ಬದವರೆಗೂ ಹಿಂದಟ್ಟಿದ್ದನು. ರಬ್ಬದಲ್ಲಿ ಅಮ್ಮೋನಿಯರ ತಡೆ ಹಿಡಿಯಲ್ಪಟ್ಟಿದ್ದರು. ಎರಡು ಸಮುವೇಲ 11 ಈ ರೀತಿ ಪ್ರಾರಂಭಗೊಳ್ಳುತ್ತದೆ: "ಮರುವರುಷ ಅರಸರು ಯುದ್ಧಕ್ಕೆ ಹೊರಡುವ ಸಮಯದಲ್ಲಿ ದಾವೀದನು ಯೋವಾಬನನ್ನೂ ತನ್ನ ಸೇವಕರನ್ನೂ ಎಲ್ಲಾ ಇಸ್ರಾಯೇಲ್ಯರನ್ನೂ ಯುದ್ಧಕ್ಕೆ ಕಳುಹಿಸಿದನು ಇವರು ಹೋಗಿ ಅಮ್ಮೋನಿಯರ ಪ್ರಾಂತಗಳನ್ನು ಹಾಳುಮಾಡಿ ರಬ್ಬಕ್ಕೆ ಮುತ್ತಿಗೆ ಹಾಕಿದರು." "ದಾವೀದನು ಯೆರೂಸಲೇಮಿನಲ್ಲಿಯೇ ಇದ್ದನು" (ವಚನ 1)[2] ಅಜ್ಜಿಯು ಹೇಳುತ್ತಿದ್ದ ಹಾಗೆ: "ಕೆಲಸವಿಲ್ಲದ ಕೈಗಳು ಸೈತಾನನ ಕಾರ್ಖಾನೆ."

ಒಂದು ಆಲಸ್ಯದ ಸಂಜೆ,[3] ಅವನ ಜನರು ರಬ್ಬದಲ್ಲಿ ಯುದ್ಧಮಾಡಿ ಸಾಯುತ್ತಾ ಇರುವಾಗ ಅವನು ಮಂಚದಿಂದೆದ್ದು, ಅರಮನೆಯ ಮಾಳಿಗೆಯ ಮೇಲೆ ತಿರುಗಾಡುತ್ತಿರುವಾಗ.[4] "ಅಲ್ಲಿಂದ ಬಹು ಸುಂದರಿಯಾದ ಒಬ್ಬ ಸ್ತ್ರೀ ಸ್ನಾನ ಮಾಡುವದನ್ನು ಕಂಡನು" (11:2). ಈ ದೃಶ್ಯದ ಬಗ್ಗೆ ಅನೇಕ ಊಹೆಗಳಿವೆ ಮತ್ತು ಈ ಪರಿಸ್ಥಿತಿಯಲ್ಲಿ ಯಾರನ್ನು ದೋಷಿಗಳೆಂದು ಪರಿಗಣಿಸಬೇಕು[5] - ಅವರ ಹೆಚ್ಚಿನ ವಿವರ ತಿಳಿದಿರುವದಿಲ್ಲ,[6] ಆದರೆ ಊಹೆಗೆ ಒಂದು ಚಿಕ್ಕ ಕಾರಣವಿದೆ. ಒಂದು ವಿಷಯ ನಮಗೆ ತಿಳಿದಿದೆ: ದಾವೀದನು ಶೋಧಿಸಲ್ಪಟ್ಟಾಗ, ಅವನು ಆ ಸ್ಥಳದಿಂದ ದೂರಕ್ಕೆ ತೆರಳಬೇಕಿತ್ತು. ಪೌಲನು ತಿಳಿಸಿದ ಹಾಗೆ ಜಾರತ್ವಕ್ಕೆ "ದೂರವಾಗಿ

*ಓಡಿ ಹೋಗಿರಿ"* (1 ಕೊರಿಂಥ 6:18; ಒತ್ತಿ ಹೇಳಿದ್ದು ನನ್ನದು). ಆದರೆ ದಾವೀದನು ತನ್ನ ಹೃದಯದಲ್ಲಿ ದುರಾಶೆಯನ್ನು ಬೆಳೆಸಿದನು - ಯಾಕೋಬನು ತಿಳಿಸಿದ ಹಾಗೆ ಈ ಕಾರ್ಯವು ಯಾವಾಗಲೂ ಆತ್ಮೀಕ ಮರಣಕ್ಕೆ ನಡಿಸುತ್ತದೆ (ಯಾಕೋಬ 1:14, 15).

ದಾವೀದನು ಆಕೆಯ ಕುರಿತು ವಿಚಾರಿಸಲಾಗಿ, ಅವಳು ಹಿತ್ತಿಯನಾದ ಊರೀಯನ ಹೆಂಡತಿ ಬೆತ್ಷೆಬಳು, ಎಂದು ತಿಳುಕೊಂಡನು. ಈ ಹಿತ್ತಿಯ ಜನಾಂಗವು ಇಸ್ರಾಯೇಲ್ಯರೊಂದಿಗೆ ಬೆರೆತಂತ ಜನಾಂಗವಾಗಿತ್ತು (ಆದಿಕಾಂಡ 23:1-20; 25:9; ಅರಣ್ಯಕಾಂಡ 13:29; ಯೆಹೋಶುವ 9:1, 2; 11:3; ನ್ಯಾಯಸ್ಥಾಪಕರು 3:5, 6; 1 ಸಮುವೇಲ 26:6). ಊರೀಯನು ಇಸ್ರಾಯೇಲ್ಯರಲ್ಲಿ ಜನಿಸಿದವನಲ್ಲ, ಆದರೆ ಆ ಹೆಸರಿನ ಅರ್ಥ "ಯೆಹೋವನು ನನ್ನ ಬೆಳಕು" ಅವನು ಅಥವಾ ಅವನ ತಂದೆ ತಾಯಿಯವರು ಯೆಹೂದ್ಯ ಮತಕ್ಕೆ ಮತಾಂತರವಾಗಿದ್ದರು ಎಂದು ತಿಳಿಸುತ್ತದೆ. 2 ಸಮುವೇಲ 23ರಲ್ಲಿ; ದಾವೀದನು "ರಣಶೂರರ" ಪಟ್ಟಿಯನ್ನು ಗಮನಿಸಿ; ಊರೀಯನ ಹೆಸರನ್ನು ನೋಡುತ್ತೇವೆ (2 ಸಮುವೇಲ 23:39, 1 ಪೂರ್ವಕಾಲವೃತ್ತಾಂತ 11:41ನ್ನೂ ನೋಡಿರಿ). ಹಿತ್ತಿಯನಾದ ಊರೀಯನು ದಾವೀದನ ಗೆಳೆಯ, ಹಾಗು ನಂಬಿಗಸ್ಥನಾದ ಒಬ್ಬ ಸ್ನೇಹಿತನಾಗಿದ್ದನು. ಪರಾಕ್ರಮಿಯಾದ, ಯುದ್ಧವೀರನಾಗಿದ್ದನು, ಹಿಂದಿನ ದಿವಸಗಳಲ್ಲಿ ದಾವೀದನಿಗಾಗಿ ತನ್ನ ಜೀವವನ್ನೇ ಮುಡಿಪಾಗಿಟ್ಟಿದ್ದನು. ಈ ವಿಷಯ ದಾವೀದನ ದುರಾಶೆಯನ್ನು ದೂರ ಮಾಡಲಿಲ್ಲ, ದೇವರ ಒಬ್ಬ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುವ ಬದಲು ಪ್ರಬಲನಾಗಿದ್ದಂತೆ ನಟಿಸಿ ಬೆತ್ಷೆಬಳಲನ್ನು ಕರೆದು ಅವಳೊಂದಿಗೆ ಜಾರತ್ವವನ್ನು ನಡಿಸಿ ಅವಳನ್ನು ಮನೆಗೆ ಹಿಂದಿರುಗಿಸಿದನು.[7]

ಸ್ವಲ್ಪ ದಿವಸದಲ್ಲಿಯೇ ತಾನು "ಗರ್ಭವತಿಯಾಗಿರುವೆನೆಂಬ" ಸುದ್ದಿಯನ್ನು ಬೆತ್ಷೆಬಳು ದಾವೀದನಿಗೆ ಮುಟ್ಟಿಸಿದಳು (KJV ವಿವರಣೆ "ಮಗುವಿನೊಂದಿಗೆ"). ತನ್ನ ಪಾಪವನ್ನು ಒಪ್ಪಿಕೊಂಡು ಅದರ ಪರಿಣಾಮವನ್ನು ಎದುರಿಸುವ ಜವಾಬ್ದಾರಿ ದಾವೀದನದಾಗಿತ್ತು. ಅದರ ಬದಲಾಗಿ, ತಾನು ಮಾಡಿದ್ದನ್ನು ಮರೆಮುಚ್ಚಲು ಪ್ರಯತ್ನಿಸಿದನು. ರಣರಂಗದಲ್ಲಿದ್ದ ಊರೀಯನನ್ನು ಮನೆಗೆ ಕಳುಹಿಸಿಕೊಡಲು, ಸೈನಾಧಿಕಾರಿಯಾದ ಯೋವಾಬನಿಗೆ, ಸಂದೇಶವನ್ನು ಕಳುಹಿಸಿದನು.

ಮುಂದಿನ ಏಳು ವಚನಗಳು ಊರೀಯನ ವಾತ್ಸಲ್ಯ ಮತ್ತು ಯಥಾರ್ಥತೆಗೂ, ದಾವೀದನ ನಟನೆ ಹಾಗೂ ಅನೀತಿಗೂ ಇದ್ದಂಥ ವ್ಯತ್ಯಾಸವನ್ನು ತೋರಿಸುತ್ತದೆ. ಊರೀಯನು ತನ್ನ ಮುಖದಲ್ಲಿ ಯುದ್ಧದ ವೇದನೆಯನ್ನು ತುಂಬಿಕೊಂಡು ದಾವೀದನ ಅರಮನೆಗೆ ಬಂದನು. ಯುದ್ಧದ ವಿಷಯವನ್ನು ತಿಳಿದುಕೊಳ್ಳಲು ಅವನನ್ನು ಕರೆಸಿದ ಕಾರಣವನ್ನು ದಾವೀದನು ತೋರಿದ್ದನು. ನಂತರ ದಾವೀದನು ಆ ಸೈನಿಕನಿಗೆ, "ಮನೆಗೆ ಹೋಗಿ ಕೈ ಕಾಲುಗಳನ್ನು ತೊಳೆದುಕೋ ಅಂದನು" (2 ಸಮುವೇಲ 11:8). ಇನ್ನೊಂದು ಅರ್ಥದಲ್ಲಿ, "ನಿನಗೆ ಸ್ವಲ್ಪ ವಿಶ್ರಾಂತಿ ಅವಶ್ಯವಿರುವದರಿಂದ ನೀನು ಮನೆಗೆ ಹೋಗಿ ನಿನ್ನ ಪಾದರಕ್ಷೆಗಳನ್ನು ತೆಗೆದು ಯುದ್ಧದ ಆಯಾಸವನ್ನು ತೆಗೆದುಹಾಕಿ ಮನೆಯಲ್ಲೆ ಸಿದ್ಧಪಡಿಸಿದ ಆಹಾರವನ್ನು ತೆಗೆದುಕೊಂಡು, ನಿನ್ನ ಹೆಂಡತಿಯೊಂದಿಗೆ ಸುಖವಾಗಿರು" ಎಂದು. ಊರೀಯನು ಎರಡು ಮಾತಿಲ್ಲದೆ, ಅದು ಅವನ ಮಗುವೆ ಎಂದು ಒಪ್ಪಿಕೊಳ್ಳುವನು ಎಂದು ದಾವೀದನು ಭಾವಿಸಿ ಊರೀಯನು ತನ್ನ ಅರಮನೆಯನ್ನು ಬಿಟ್ಟುಹೋದ ನಂತರ ಅವನಿಗೆ ಉಡುಗೊರೆಗಳನ್ನೂ ಸಹ ಕಳುಹಿಸಿದನು,[8] ಅವನನ್ನು ಮನೆಗೆ ಕಳುಹಿಸಿದ್ದಕ್ಕೆ ಇದು ಹೆಚ್ಚಿನ ಸಂಬಳವಾಗಿತ್ತು.

ಹಾಗೂ, ದಾವೀದನು ಊರೀಯನ ಕರ್ತವ್ಯ ನಿಷ್ಠೆಯ ಬಗ್ಗೆ ಯೋಚಿಸಲಿಲ್ಲ. ಊರೀಯನ ಮನೆ ಸಮಿಪದಲ್ಲೆ ಇತ್ತು,[9] ಆದರೆ ಅವನು ಅಲ್ಲಿಗೆ ಹೋಗದೆ "ಅರಸನ ಸೇವಕರೊಡನೆ ಅರಮನೆಯ ಬಾಗಿಲಲ್ಲೇ ಮಲಗಿಕೊಂಡನು" (11:9)! ಈ ವರ್ತಮಾನವು ದಾವೀದನಿಗೆ ಮುಟ್ಟಿದಾಗ ಅವನಿಗೆ ಆಶ್ಚರ್ಯವಾಯಿತು. ಉರೀಯನೆ ಸ್ವತಹ ದಾವೀದನನು ಕುರಿತು

ತೀರ್ಮಾನಿಸಿದನು, ಯಾರಿಂದಾರೂ ಬೆತ್ತೆಬಳಿಂದ ದೂರವಿರುವರೇ! ದಾವೀದನು ಅವನಿಗೆ "ನೀನು ಪ್ರಯಾಣ ಮಾಡಿಕೊಂಡು ಬಂದಿಯಲ್ಲಾ? ಯಾಕೆ ಮನೆಗೆ ಹೋಗಲಿಲ್ಲ?" ಅಂದನು (11:10). ಊರೀಯನ ಉತ್ತರವು ದಾವೀದನ ದೀರಶೂರರ ಯಥಾರ್ಥತೆಯ ಸದ್ಗುಣವನ್ನು ಎತ್ತಿ ತೋರಿ ಸುತ್ತಿತ್ತು:

> ಒಡಂಬಡಿಕೆಯ ಮಂಜೂಷವೂ[10] ಇಸ್ರಾಯೇಲ್ಯರೂ ಯೆಹೂದ್ಯರೂ ಗುಡಾರಗಳಲ್ಲಿ ವಾಸವಾಗಿದ್ದಾರೆ. ನನ್ನ ಒಡೆಯನಾದ ಯೋವಾಬನೂ ಅವನ ಸೇವಕರೂ ಬೈಲಿನಲ್ಲಿ ಪಾಳೆಯ ಮಾಡಿಕೊಂಡಿದ್ದಾರೆ. ಹೀಗಿರುವಲ್ಲಿ ನಾನು ನನ್ನ ಮನೆಗೆ ಹೋಗಿ ಉಂಡು ಕುಡಿದು ಹೆಂಡತಿಯೊಡನೆ ಮಲಗಿಕೊಳ್ಳುವದು ಹೇಗೆ? ನಿನ್ನಾಣೆ, ನಿನ್ನ ಜೀವದ ಆಣೆ, ನಾನು ಇಂಥದನ್ನು ಮಾಡುವದೇ ಇಲ್ಲ ಎಂದು ಉತ್ತರಕೊಟ್ಟನು (11:11).

ಊರೀಯನು ಮಂಜೂಷದ ಕುರಿತು ಅವನ ಸೈನಾಧಿಕಾರಿಯಾದ ಒಡೆಯನ ಕುರಿತು ಮತ್ತು ಸೈನ್ಯದವರ ಕುರಿತಾದ ಗೌರವ ಭಾವನೆ ಮತ್ತು ತನ್ನ ಜೊತೆ ಸೈನ್ಯದವರು, ಮರುಭೂಮಿಯ ಬಿಸಿಲಿನಲ್ಲಿ ತಾಪ ಪಡುವಾಗ ತಾನು ಸಂತೋಷವಾಗಿ ಮನೆಯಲ್ಲಿರುವದು ನ್ಯಾಯವಲ್ಲ ಎಂಬುದಾಗಿ ಹೇಳುವಾಗ ಸಾಮನ್ಯವಾಗಿ ದಾವೀದನು ಕೇಳಿದ ವಿಷಯ "ನಾನು ಇಂಥ ಸಮಯದಲ್ಲಿ ಹೆಂಡತಿಯೊಡನೆ ಮಲಗಿಕೊಳ್ಳುವದು ಹೇಗೆ? ನಾನು ಇದನ್ನು ಮಾಡುವುದೇ ಇಲ್ಲ ಎಂದನು." ಈ ಮಾತುಗಳು ದಾವೀದನ ಮನೋಭಾವವನ್ನು ಬದಲಾಯಿಸದೆ ಹೋದದ್ದನ್ನು ನಾನು ಊಹಿಸಿಕೊಳ್ಳುತ್ತೇನೆ.

ದಾವೀದನ ಹಣೆಯ ಮೇಲೆ ಬೆವರಿನ ಹನಿಗಳನ್ನು ನಾನು ನೋಡುತ್ತೇನೆ. ಆತನ ಆಲೋಚನೆಯನ್ನು ನಾನು ಕೇಳುತ್ತೇನೆ: "ನಾನು ಏನು ಮಾಡಲಿ?" ಊರೀಯನು ಇನ್ನೂ ಕೆಲವು ದಿವಸಗಳು ಯೆರೂಸಲೇಮಿನಲ್ಲೆ ತಂಗಲಿ ಎಂಬುದಾಗಿ ಹೇಳುತ್ತೇನೆ. ಆಗ ಇನ್ನೊಂದು ಯೋಜನೆಯನ್ನು ಮಾಡಬಹುದು. ಬಿ. ಯೋಜನೆಯ ಡಿ: ಯೋಜನೆಗೆ ಮಾರ್ಪಾಡಾಯಿತು. ಕುಡಿತದ ಪ್ರಯೋಗ ಊರೀಯನು ಕುಡಿದು ಮತ್ತನಾದರೆ ತನ್ನ ಯಥಾರ್ಥತೆಯನ್ನು ಬಿಟ್ಟು ಹೋಗಿ ತನ್ನ ಹೆಂಡತಿಯೊಡನೆ ಮಲಗಿಕೊಳ್ಳುವನು.

ಆ ರಾತ್ರಿ ಅರಸನ ಔತಣಕ್ಕೆ ಊರೀಯನು ಆಹ್ವಾನಿಸ್ಪಟ್ಟನು. ಆ ಔತಣವು ಮಾಹಾದೇವರ ಸೇವಕರಿಗೆ ನೀಡುವಂಥ ಔತಣಕ್ಕೆ ಬದಲಾಗಿ ವಿಗ್ರಹ ಪೂಜಕರಿಗೆ ನೀಡುವಂಥ ಔತಣವಾಗಿತ್ತು. ದಾವೀದನು ಅವನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಮತ್ತನನ್ನಾಗಿ ಮಾಡಿದನು. ಪುನ ದಾವೀದನು ಊರೀಯನ ಯಥಾರ್ಥತೆಯನ್ನು ಕೀಳಾಗಿ ಕಂಡನು. ಊರೀಯನು ಕುಡಿದು ಮತ್ತನಾಗಿದ್ದರೂ ಸ್ಥಿರಚಿತ್ತನಾಗಿದ್ದ ದಾವೀದನಿಗಿಂತಲೂ, ಉತ್ತಮನಾದ ಮನುಷ್ಯನಾಗಿದ್ದನು. "ಆದರೆ ಆ ರಾತ್ರಿಯಲ್ಲಿಯೂ ಅವನು ಹೋಗಿ ತನ್ನ ಯಜಮಾನನ ಸೇವಕರ ಹತ್ತಿರ ಹಾಸಿಗೆ ಹಾಸಿ ಮಲಗಿಕೊಂಡನೇ ಹೊರತು ತನ್ನ ಮನೆಗೆ ಹೋಗಲಿಲ್ಲ" (11:13).

ಯಾವಾಗ ಒಬ್ಬನು ತನ್ನ ಪಾಪವನ್ನು ಮುಚ್ಚಲು ಪ್ರಯತ್ನಿಸುತ್ತಾನೋ, ಅವನು ಎಂದಿಗೂ ತಪ್ಪಿಸಿಕೊಳ್ಳಲಾರನು. ನಮ್ಮ ಹಿಂದಿನ ಸಂಚಿಕೆಯಲ್ಲಿ ನಾವು ಗಮನಿಸಿದ್ದೇವೆ. "ದಾವೀದನು ಇಸ್ರಾಯೇರ್ಯರೆಲ್ಲರ ಅರಸನಾಗಿ ಎಲ್ಲಾ ಪ್ರಜೆಗಳಿಗೂ ಧರ್ಮ ತಪ್ಪದೆ ನ್ಯಾಯತೀರಿ ಸುತ್ತಿದ್ದನು" (2 ಸಮುವೇಲ 8:15). ಈಗ ತನ್ನಲ್ಲಿ ಪಾಪವಿದ್ದದ್ದರಿಂದ ನ್ಯಾಯ, ನೀತಿಯುಳ್ಳ, ನ್ಯಾಯಾಧಿಪತಿಯು ಮುಗ್ದನ ಮೇಲೆ ಮರಣಧಂಡನೆಯನ್ನು ಘೋಷಿಸಿದನು. ಮರುದಿನ ಬೆಳಿಗ್ಗೆ ದಾವೀದನು ಯೋವಾಬನಿಗೆ ಒಂದು ಪತ್ರವನ್ನು ಬರೆದು ಅದನ್ನು ಊರೀಯನ ಕೈಯಲ್ಲಿ ಕೊಟ್ಟುಕಳುಹಿಸಿದನು. ಅದರಲ್ಲಿದ್ದದ್ದೇನೆಂದರೆ, "ಊರೀಯನು ಗಾಯ ಹೊಂದಿ ಸಾಯುವಂತೆ ಅವನನ್ನು ಘೋರಯುದ್ಧ ನಡೆಯುತ್ತಿರುವ ಕಡೆಗೆ ಮುಂಭಾಗದಲ್ಲಿ ನಿಲ್ಲಿಸಿ ನೀವು ಹಿಂದಕ್ಕೆ ಸರಿದುಕೊಳ್ಳಿರಿ ಎಂಬದೇ" (11:15). ಆ ಪತ್ರವನ್ನು "ಊರೀಯನ

ಕೈಯಲ್ಲೆ ಕಳುಹಿಸಿದ್ದು ಆಸ್ಯಾಸ್ಪದವಾಗಿತ್ತು" (11:14); ಆ ಮರಣದ ಪತ್ರವನ್ನು ಅವನ ಕೂಡ ಕಳುಹಿಸಿದ್ದು. ಊರೀಯನ ಯಥಾರ್ಥತೆಯನ್ನು ಎತ್ತಿ ತೋರಿಸುತ್ತಿತ್ತು. ಈ ವಿಷಯದಲ್ಲಿ ದಾವೀದನು, ಅವನ ನಂಬಿಕೆಯುಳ್ಳ ಸೈನಿಕನಾದ ಊರೀಯನ ಮೇಲೆ ಇಟ್ಟಿದ ಗೌರವವನ್ನು ತೋರಿಸುತ್ತಿತ್ತು, ದಾವೀದನ ಈ ಆಜ್ಞೆಯನ್ನು ಪಾಲಿಸಲು ಅವನು ಹಿಂಜರಿಯಲಿಲ್ಲ.

> ಇನ್ನೊಂದು ಸಾರಿ ಯೋವಾಬನು ಅರಸನು ಆಜ್ಞೆಗಳನ್ನು ಪ್ರಶ್ನಿಸದೆ ಸ್ವೀಕರಿಸಿದ್ದನು ಗಮನಿಸುತ್ತೇವೆ. ಪತ್ರದಲ್ಲಿದ್ದ ಅರಸನ ಒಳಿತನ್ನು ನೆರವೇರಿಸಿದನು. ಯೋವಾಬನು ಪಟ್ಟಣಕ್ಕೆ ಮುತ್ತಿಗೆಹಾಕುವಾಗ ಶೂರರಾದ ಶತ್ರು ಸೈನಿಕರೆಲ್ಲಿರುತ್ತಾರೆಂದು ಗೊತ್ತು ಮಾಡಿಕೊಂಡು ಊರೀಯನನ್ನು ಅಲ್ಲಿ ನಿಲ್ಲಿಸಿದನು.[11] ಆ ಊರಿನ ಜನರು ಹೊರಗೆ ಬಂದು ಯೋವಾಬನೊಡನೆ ಕಾದಿದಾಗ ದಾವೀದನ ಸೇವಕರಲ್ಲಿ ಕೆಲವರು ಸತ್ತರು. ಹಿತ್ತಿಯನಾದ ಊರೀಯನೂ ಮಡಿದನು (11:17). ದಾವೀದನು ತನ್ನ ಪಾಪವನ್ನು ಮುಚ್ಚಿಹಾಕುವಾಗ ಗಮನಿಸಿ. ಇನ್ನು ಅನೇಕ ಸೇವಕರು ಉರೀಯನ ಸಂಗಡ ಮಡಿದರು. ಸೆಪ್ಟಜೂಯಂಟ್ ಪ್ರಕಾರ ಇತ್ತರೆ 18 ಜನರು ಮಡಿದರು. ಈ ಹತ್ತೊಂಬತ್ತು ಕುಟುಂಬಗಳಲ್ಲಿ ಒಬ್ಬರು ಮಗನನ್ನು, ಇನ್ನೊಬ್ಬರು ಸಹೋದರನನ್ನು, ಇನ್ನೊಬ್ಬರು ಗಂಡನನ್ನು ಅಥವಾ ತಂದೆಯನ್ನು ದಾವೀದನ ಶಾರೀರಕೆ ತೃಷ್ಣೆಯನ್ನು ನೀಗಿಸುವ ಸಲುವಾಗಿ ಕಳಕೊಂಡರು.

ಯೋವಾಬನು ಈ ಯುದ್ಧದ ವಿಷಯವನ್ನು ದಾವೀದನಿಗೆ ತಿಳಿಸುವಾಗ ಒಂದು ಸ್ಪರ್ಷದ ಮಾತನ್ನು ಸಹ ಸೇರಿಸಿದ್ದನು - "ನೀನು ಯುದ್ಧ ಸಮಾಚಾರವನ್ನು ಹೇಳಿ ಮುಗಿಸಿದ ನಂತರ ಅರಸನು ಇದರ ಪರಿಣಾಮದ ಕುರಿತು ಮುಗಿದು ಕೊಂದರೆ ನೀನು - ಹಿತ್ತಿಯನಾದ ನಿನ್ನ ಸೇವಕ ಊರೀಯನೂ ಮೃತಿಹೊಂದಿದನು[12] ಎಂದು ಹೇಳು ಎಂಬುದಾಗಿ ಆಜ್ಞಾಪಿಸಿ ಅವನನ್ನು ಕಳುಹಿಸಿದನು" (11:20, 21).

ಸಂದೇಶದೂತನು ಯೋವಾಬನು ಹೇಳಿದಂತೆ ತಿಳಿಸಿದನು, "ನಿನ್ನ ಸೇವಕರ ಮೇಲೆ ಬಾಣಗಳನ್ನು ಎಸೆದದರಿಂದ ಅವರಲ್ಲಿ ಕೆಲವರು ಮಡಿದರು. ಹಿತ್ತಿಯನಾದ ನಿನ್ನ ಸೇವಕ ಊರೀಯನೂ ಮಡಿದನು" (11:24).

"ಕೆಲವರನ್ನು ಗಳಿಸುತ್ತೀ - ಕೆಲವರನ್ನು - ಕಳಕೊಳ್ಳುತ್ತೀರಿ" ದಾವೀದನ ಉತ್ತರವು ನಮ್ಮ ಮನಸ್ಸನ್ನು ಮುರಿಯುವಂಥದ್ದಾಗಿದೆ. ಆತನು ನಿರಾಳವಾಗಿ ಕಪಡತನದ ಉತ್ತರವನ್ನು ನೀಡಿದನು. "ಇದಕ್ಕೋಸ್ಕರವಾಗಿ ವ್ಯಸನಪಡಬೇಡ ಕತ್ತಿಯು ಈ ಹೊತ್ತು ಒಬ್ಬನನ್ನು ನುಂಗಿದರೆ ನಾಳೆ ಇನ್ನೊಬ್ಬನನ್ನು ನುಂಗುವದು" (11:25).

ಬೆತ್ಷೆಬಳು ತನ್ನ ಗಂಡನಾದ ಊರೀಯನ ಮರಣ ವಾರ್ತೆಯನ್ನು ಕೇಳಿ ಗೋಳಾಡಿದಳು.[13] ಗೋಳಾಡಿದ ದಿವಸಗಳು ಮುಗಿದ ಮೇಲೆ (ಬಹುಶ ಏಳು ದಿವಸಗಳು; ಆದಿಕಾಂಡ 50:10; 1 ಸಮುವೇಲ 31:13 ನೋಡಿರಿ), ದಾವೀದನು ಆಕೆಯನ್ನು ಕರೆ ಕಳುಹಿಸಿ ತನ್ನ ಹೆಂಡತಿಯನ್ನಾಗಿ ಮಾಡಿಕೊಂಡನು - ಬೆತ್ಷೆಬಳು ಅಂತಪುರದಲ್ಲಿ ಕೆಲವು ತಿಂಗಳುಗಳು ಕಳೆದ ನಂತರ ಆರೋಗ್ಯದಾಯಕವಾದ ಗಂಡು ಮಗುವಿಗೆ ಜನ್ಮ ನೀಡಿದಳು. ಅವನನ್ನು ಎಲ್ಲರೂ ಅಭಿನಂಧಿಸುತ್ತಿರುವಾಗ, ತನ್ನ ಪಾಪವನ್ನು ಮುಚ್ಚಿ ಹಾಕಿದ ತಂತ್ರವು ಸಫಲವಾಯಿತು ಎಂದು ತಿಳುಕೊಂಡನು. ಯಾರಿಗೂ ಇವನ ಕುತಂತ್ರವು ಬಯಲಾಗಲಿಲ್ಲ, ಯಾರಿಗೂ ಇಲ್ಲ? ಅರಮನೆಯಲ್ಲಿ ಇದ್ದವರಿಗೆ ತಿಳಿದಿತ್ತು. ಅವನ ಸೇವಕರಿಗೆ ತಿಳಿದಿತ್ತು. ಯೋವಾಬನಿಗೆ ತಿಳಿದಿತ್ತು. ಎಲ್ಲರಿಗೂ ತಿಳಿದಿತ್ತು.[14] ಬಹಳ ಪ್ರಾಮುಖ್ಯವಾಗಿ, ದೇವರಿಗೂ ತಿಳಿದಿತ್ತು - ಮತ್ತು ದಾವೀದನಿಗೂ ತಿಳಿದಿತ್ತು.

ದೇವರ ನಿಕಟವಾದ ಅನ್ಯೋನ್ಯತೆಯ ಅನುಭವವನ್ನು ಅನುಭವಿಸಿದ್ಧ ದಾವೀದನೂ, ಕೆಲವೇ ದಿವಸಗಳ ಅಂತರದಲ್ಲಿ ಶೇಕಡ ನಲವತ್ತರಷ್ಟು ದಾಶಾಜ್ಞೆಗಳನ್ನು ಮುರಿದಿದ್ದನು:[15] "ನೀನು ಮತ್ತೊಬ್ಬನ ... ಹೆಂಡತಿಯನ್ನು ಆಶಿಸಬಾರದು"; "ನೀನು ವ್ಯಭಿಚಾರಮಾಡ

ಬಾರದು"; "ನೀನು ಸುಳ್ಳುಸಾಕ್ಷಿ ಹೇಳಬಾರದು"; "ನೀನು ನರಹತ್ಯ ಮಾಡಬಾರದು" (ವಿಮೋಚನಕಾಂಡ 20:17, 14, 16, 13). ದೇವರ ಭಯವಿರುವವರು ಎರಡು ನಿಮಿಷದಲ್ಲಿಯೇ ತೀರ್ಪನ್ನು ಪ್ರಕಟಿಸಲು ಸಾಧ್ಯವಿದೆ. ಅದೇನೆಂದರೆ "ಅವನನ್ನು ತೆಗೆದುಕೊಂಡು ಹೋಗಿ ಗಲ್ಲಿಗೇರಿಸಿ!" ಆದರೆ ದೇವರ ತೀರ್ಪನ್ನು ಕೇಳಿರಿ: "ದಾವೀದನ ಈ ಕೃತ್ಯವು ಯೆಹೋವನ ದೃಷ್ಟಿಯಲ್ಲಿ ಕೆಟ್ಟದ್ದಾಗಿತು" (11:27ಬಿ).

**ಭಾದೆ**

ದಾವೀದನ ಪಾಪ ಕೃತ್ಯದ ಬಗ್ಗೆ ನಮಗೆ ಸ್ಪಷ್ಟತೆ ಉಂಟಾಗಿದೆ. ಆ ಪಾಪಗಳ ಪರಿಣಾಮಗಳನ್ನು ನಾವುಗಳು ತಿಳಿಯಬೇಕಾಗಿದೆ.

ದಾವೀದನು ಪೂರ್ವ ಅರಸರು ಮಾಡಿದ ಪಾಪಕೃತ್ಯಕ್ಕಿಂತಲೂ ದಾವೀದನ ಪಾಪವು ಘೋರವಾಗಿತ್ತು. ಅರಸನಾದ ಸೌಲನು ಅಮಾಲೇಕ್ಯರನ್ನು ಸಂಪೂರ್ಣವಾಗಿ ಸಂಹರಿಸಬೇಕೆಂದು ಅಪ್ಪಣೆ ಹೊಂದಿದ್ದರು. ಅವನು ಹಾಗೆ ಮಾಡಲಿಲ್ಲ. ಈ ಪಾಪದ ನಿಮಿತ್ತ ಅವನು ರಾಜನ ಸ್ಥಾನದಿಂದ ತಿರಸ್ಕರಿಸಲ್ಪಟ್ಟನು (1 ಸಮುವೇಲ 15:1-23). ನಮ್ಮೆಲ್ಲರ ದೃಷ್ಟಿಯಲ್ಲಿ, ದಾವೀದನ ಪಾಪವು ಸೌಲನ ಪಾಪಕ್ಕಿಂತ ಘೋರವಾಗಿತ್ತು ಎಂದು ಒಪ್ಪಿಕೊಳ್ಳುತ್ತೇವೆ. ಇವನು ದೇವರ ಅನ್ಯೋನ್ಯತೆಯಲ್ಲಿ ನಡೆದ ಮನುಷ್ಯನಾಗಿದ್ದನು; ಈಗ ಅವನು ಪಾಪದಲ್ಲಿ ಉರುಳಾಡುತ್ತಿದ್ದನು. ಪಾಪದ ಕೆಸರಿನಲ್ಲಿ ಆಳವಾಗಿ ಇಳಿದು ಹೋಗುತ್ತಿದ್ದನು. ಸೌಲನ ಪಾಪದ ಪರಿಣಾಮವನ್ನು, ದಾವೀದನ ಪಾಪದ ಸಂಗಡ ಹೋಲಿಸುವದಾದರೆ ಇದರ ಪರಿಣಾಮವು ನಮ್ಮನ್ನು ತತ್ತರಿಸುವಂತೆ ಮಾಡುತ್ತದೆ!

ಪಾಪವು, ದಾವೀದನನ್ನು, ಯಾವ ರೀತಿಯಲ್ಲಿ ನಾಶಪಡಿಸಿತು ಎಂದು ಆಲೋಚಿಸುವದು ಬಹು ಪ್ರಾಮುಖ್ಯ. ಇದರ ಲೆಕ್ಕಾಚಾರವನ್ನು 2 ಸಮುವೇಲದಲ್ಲಿ ಓದುವುದಾದರೆ ಈ ಒಂದು ಅಂಶವನ್ನು ನಾವು ಕಳೆದುಕೊಳ್ಳುವ ಸಾಧ್ಯತೆ ಇದೆ. ದೇವರೊಂದಿಗಿನ ಅನ್ಯೋನ್ಯತೆಯಲ್ಲಿದ್ದ ಮನುಷ್ಯನ ಹೃದಯಕ್ಕೂ ಆತ್ಮಕ್ಕೂ ಈ ಮೇಲಿನ ಪರಿಣಾಮ ಎಂಥದ್ದಾಗಿತ್ತು ಎಂದು ಊಹಿಸಿಕೊಳ್ಳೋಣ. ಆದರೆ ಹೇಗೂ, ನಾವು ಊಹಿಸಿಕೊಳ್ಳುವ ಅವಶ್ಯವಿಲ್ಲ. ಕೀರ್ತನೆ 32 ಈ ರೀತಿ ತಿಳಿಸುತ್ತದೆ:[16]

> ನಾನು [ನನ್ನ ಪಾಪವನ್ನು] ಅರಿಕೆ ಮಾಡದೆ
> ಇದ್ದಾಗ ದಿನವೆಲ್ಲಾ
> ನರಳುವದರಿಂದ ನನ್ನ ಎಲುಬುಗಳು ಸವೆದು ಹೋಗುತ್ತಿದ್ದವು.
> ಹಗಲಿರುಳು ನಿನ್ನ ಶಿಕ್ಷಾಹಸ್ತವು ನನ್ನ
> ಮೇಲೆ ಭಾರವಾಗಿತ್ತು;
> ಬೇಸಿಗೆಯ ನೀರಿನಂತೆ ನನ್ನ ಶರೀರದ
> ಸಾರವೆಲ್ಲಾ ಬತ್ತಿಹೋಯಿತು (ವಚನಗಳು 3, 4).[17]

ಆ ದಿವಸಗಳಲ್ಲಿ ನೀವು ದಾವೀದನನ್ನು ನೋಡಿದ್ದರೆ, ಅವನು ಒಂದೇ ರೀತಿ ಇರುವದಕ್ಕೆ ಸಾಧ್ಯವಿತ್ತು. ಬಹುಶ ಸೋತು ಬೇಸರಪಟ್ಟವನಾಗಿದ್ದರೂ ಇನ್ನೂ ಸಿಂಹಾಸನದ ಮೇಲಿದ್ದನು. ಮತ್ತು ತನ್ನ ರಾಜಕಿಯ ಕರ್ತವ್ಯವನ್ನು ನಿರ್ವಹಿಸುತ್ತಿದ್ದನು. ಆದರೆ ಅಂತರಾಳದಲ್ಲಿ ಪಾಪವು ಅವನನ್ನು ಹರಿದು ತಿನ್ನುತ್ತಿತ್ತು. ಪಾಪವು ಬಹು ಘೋರವಾದದ್ದು!

ಮೂರು ಸಾವಿರ ವರ್ಷಗಳ ಹಿಂದೆ ನಡೆದ ಘಟನೆಯ ಬಗ್ಗೆ ನಾವು ತಿಳುಕೊಳ್ಳುವ ಪ್ರಾಮುಖ್ಯತೆ ಏನಿದೆ? ಯಾಕೆಂದರೆ ದಾವೀದನು ಸಿಕ್ಕಿಕೊಂಡ ಪಾಪಕ್ಕೆ ನಾವು ಸಹ ಸಿಕ್ಕಿಕೊಳ್ಳುವ ಸಾಧ್ಯತೆ ಇದೆ. ಮತ್ತು ಪಾಪವು ನಮ್ಮಲ್ಲಿ ಅಭಿವೃದ್ಧಿಯಾಗುವ ಸಂಭವವಿದೆ. ಇದು ನಮ್ಮ ಜೀವಿತವನ್ನು ಮುರಿದುಹಾಕುವವರೆಗೆ ಮುಂದುವರಿಯುತ್ತದೆ. ಈ ಕಾರ್ಯವು

ನಮ್ಮ ಜೀವಿತದಲ್ಲಿ ನಡೆಯುವಾಗ ಇಂಥ ಒಂದು ಸಂಕಷ್ಟದಿಂದ ಹೊರಬರುವ ವಿಷಯವು ನಮಗೆ ತಿಳಿದಿರಬೇಕಾಗುತ್ತದೆ.

## ದಾವೀದನು ತನ್ನ ಜೀವಿತವನ್ನು ಪುನ ಕ್ರಮ ಪಡಿಸಿಕೊಳ್ಳಲು ಮಾಡಬೇಕಾದ ಕಾರ್ಯವೇನು (2 ಸಮುವೇಲ 12)

ಜನರು ತಮ್ಮ ಜೀವಿತವನ್ನು ಅಕ್ರಮ ಪಡಿಸಿಕೊಳ್ಳುವಾಗ ಅವರ ಜೀವಿತವನ್ನು ಸರಿಪಡಿಸಿಕೊಂಡು ಪುನ ಜೀವಿತವನ್ನು ಒಟ್ಟಾಗಿ ಸೇರಿಸಿಕೊಳ್ಳಿರಿ ಎಂಬುದಾಗಿ ಹೇಳುವಂಥ ಶೋಧನೆಗೆ ಒಳಗಾಗುತ್ತೇವೆ. ಅನೇಕ ಸಾರಿ ನಾವು ಹೇಳುವಂತೆ ಈ ಸಂಗತಿ ಅಷ್ಟು ಸುಲಭವಾಗಿರುವದಿಲ್ಲ. ದಾವೀದನು, ತನ್ನ ಜೀವಿತದಲ್ಲಿ ಸಂಕಷ್ಟಕ್ಕೆ ಒಳಗಾದಾಗ ಅವನಿಗೆ ಅವಶ್ಯವಿದ್ದ ನಾಲ್ಕು ಸಂಗತಿಗಳನ್ನು ನಮ್ಮ ಅದ್ಯಾಯನದಲ್ಲಿ ನೋಡುತ್ತೇವೆ:

### ಸಂಪೂರ್ಣವಾಗಿ ಯಥಾರ್ಥವಾದಂಥ ವ್ಯಕ್ತಿಯ ಅವಶ್ಯ ಅವನಿಗಿತ್ತು

ಇಂಥ ಒಬ್ಬ ವ್ಯಕ್ತಿಯನ್ನು ದಾವೀದನು ಹೊಂದಿದ್ದರಿಂದ ಅವನು ಧನ್ಯನಾಗಿದ್ದನು. ಅವನನ್ನು ತಿಳುಕೊಂಡು ಅವನನ್ನು ಸಂಧಿಸಿ ಅವನ ಹೃದಯವನ್ನು ಸ್ಪರ್ಷಿಸುವಂಥ ಒಬ್ಬ ವ್ಯಕ್ತಿಯು ಅವನಿಗೆ ದೊರೆತನು. ಅವನೇ ಪ್ರವಾದಿಯಾದ ನಾತಾನನು.[18]

ದೇವರು ನಾತಾನನನ್ನು ದಾವೀದನ ಬಳಿಗೆ ಕಳುಹಿಸುವಾಗ. ನಾತಾನನು ಒಂದು ದೃಷ್ಟಾಂತವನ್ನು ಕನ್ನಡಿಯಾಗಿ ದಾವೀದನ ಹೃದಯಕ್ಕೆ ಹಿಡಿದನು:

> ಅವನು ದಾವೀದನ ಹತ್ತಿರ ಬಂದು ಹೇಳಿದ್ದೇನಂದರೆ - ಒಂದು ಊರಲ್ಲಿ ಇಬ್ಬರು ಮನುಷ್ಯರಿದ್ದರು; ಒಬ್ಬನು ಐಶ್ವರ್ಯವಂತನು, ಇನ್ನೊಬ್ಬನು ಬಡವನು. ಐಶ್ವರ್ಯವಂತನಿಗೆ ಬಹಳ ಕುರಿದನಗಳಿದ್ದವು.
>
> ಬಡವನಿಗೆ ಒಂದು ಕುರಿಮರಿಯು ಹೊರತು ಬೇರೇನೂ ಇರಲಿಲ್ಲ.
> ಅವನು ಅದನ್ನು ಕೊಂಡು ಕೊಂಡು ಸಾಕುತ್ತಿದ್ದನು.
>
> ಅದು ದೊಡ್ಡದಾಗುವವರೆಗೆ ಮಗಳಂತೆ ಅವನ ಸಂಗಡಲೂ ಅವನ ಮಕ್ಕಳ ಸಂಗಡಲೂ ಇದ್ದುಕೊಂಡು ಅವನೊಡನೆ ರೊಟ್ಟಿ ತಿನ್ನುತ್ತಾ ಅವನ ಪಾತ್ರೆಯಲ್ಲೇ ನೀರು ಕುಡಿಯುತ್ತಾ ಇತ್ತು; ಅವನ ಎದೆಯ ಮೇಲೆಯೇ ಒರಗಿಕೊಂಡು ನಿದ್ರೆ ಮಾಡುತ್ತಿತು (12:1-3).

(ಆ ಕುರಿಮರಿಯು ಮಕ್ಕಳೊಂದಿಗೆ ಆಡುತ್ತಲೂ, ಅವರ ಮೇಜಿನ ಪಾತ್ರೆಗಳಿಂದ ಕುಡಿಯುತ್ತಲೂ, ಅವರ ಹಾಸಿಗೆಯ ಬಳಿಯಲ್ಲಿ ಮಲಗಿಕೊಳ್ಳುತ್ತಾ ಇರುವದನ್ನು ನಾನು ನೋಡುತ್ತೇನೆ.)

> ಒಂದು ದಿವಸ ಐಶ್ವರ್ಯವಂತನ ಮನೆಗೆ ಒಬ್ಬ ಪ್ರಯಾಣಿಕನು ಬಂದನು. ಆಗ ಐಶ್ವರ್ಯವಂತನು ತನ್ನ ಕುರಿದನಗಳಿಂದ ಏನೂ ತೆಗೆದುಕೊಳ್ಳ ಮನಸ್ಸಿಲ್ಲದೆ ಆ ಬಡವನ ಕುರಿಮರಿಯನ್ನು ಹಿಡಿದು ಅತಿಥಿಗೋಸ್ಕರ ಅದನ್ನು ಅಡಿಗೆ ಮಾಡಿಸಿದನು ಎಂಬದೇ (12:4).

ಇದನ್ನು ಕೇಳಿದಾಗ ದಾವೀದನ ನ್ಯಾಯವಾದ ಹೃದಯ ಕಂಪಿಸಿತು.

> ಇದನ್ನು ಕೇಳಿ ದಾವೀದನು ಆ ಮನುಷ್ಯನ ಮೇಲೆ ಬಹಳವಾಗಿ ಕೋಪಗೊಂಡು[19] "ನಾತಾನನಿಗೆ - ಯೆಹೋವನಾಣೆ, ಆ ಮನುಷ್ಯನು ಸಾಯಲೇ ಬೇಕು.[20] ಅವನು

> ಕರುಣೆಯಿಲ್ಲದೆ ಹೀಗೆ ಮಾಡಿದ್ದರಿಂದ ಆ ಕುರಿಮರಿಗಾಗಿ ನಾಲ್ಕರಷ್ಟು ಹಿಂದಕ್ಕೆ ಕೊಡ ಬೇಕು ಅಂದನು"[21] (12:5, 6).

ಆಗ ನಾತಾನನು ಅವಮಾನದ ಮಾತನ್ನು ಹೇಳಿ! "ಆ ಮನುಷ್ಯನು ನೀನೇ ಅಂದನು" (12:7ಎ).

ಬೈಬಲಿನಲ್ಲಿ ದಾಖಲಾಗಿರುವ ಈ ಮೂಲ ಸತ್ಯಾಂಶಗಳನ್ನು ವೀಡಿಯೋ ಟೇಪ್‌ಗಳ ಮೂಲಕ ದಾಖಲಿಸಿ, ಅವುಗಳು *ಹೇಗೆ* ನಡೆದವು ಎಂದು ನಾವು ವೀಕ್ಷಿಸಬಹುದೇ? ಬಹುಶ ಪ್ರವಾದಿಯಾದ ನಾತಾನನು ದಾವೀದನ ಮುಂದೆ ಹೊಳೆಯುವ ಕಣ್ಣುಗಳಿಂದಲೂ ತೋರು ಬೆರಳನ್ನು ತೋರಿಸುತ್ತಲೂ, ನಿಂದನೆಯ ಸ್ವರದಿಂದಲೂ ನಿಂತು: "ಆ ಮನುಷ್ಯನು ನೀನೇ ಅಂದನು!" ಹಾಗೂ ನಾನು ಈ ರೀತಿಯಾಗಿ ಗ್ರಹಿಸುತ್ತೇನೆ, ನಾತಾನನು ಮನಮುರಿದ ಸ್ನೇಹಿತ ನಾಗಿ, ಮನನೊಂದ ದಾವೀದನಿಗೆ ಕಣ್ಣೀರಿನಿಂದ ತುಂಬಿದವನಾಗಿ ನಡುಗುವ ಸ್ವರದಿಂದ ದಾವೀದನೇ ನಾನು ಮಾತನಾಡುತ್ತಿರುವ, "ಆ ಮನುಷ್ಯನು ನೀನೇ ಅಂದನು. ನಿನ್ನಲ್ಲಿ ಬೇಕಾದಷ್ಟು ಇರುತ್ತದೆ ಆದರೆ ಊರೀಯನಲ್ಲಿ ಸ್ವಲ್ಪವೇ ಇತ್ತು. ಅವನಲ್ಲಿದ್ದದನ್ನು ನೀನು ತೆಗೆದುಕೊಂಡೆ - ಅವನ ಹೆಂಡತಿಯನ್ನು ಅವನ ಜೀವವನ್ನು ಸಹ ತೆಗೆದುಕೊಂಡೆ."

ನಾತಾನನು ಯಥಾರ್ಥವಾಗಿ, ದಾವೀದನ ಹೃದಯದಲ್ಲಿದ್ದ ಅಲ್ಪಭಾವನೆಗೆ ಸಂದೇಶ ವನ್ನು ನೀಡಿದನು:

> ... ಇಸ್ರಾಯೇಲ್ ದೇವರಾದ ಯೆಹೋವನು ನಿನಗೆ ಹೇಳುವದೇನಂದರೆ ನಿನ್ನನ್ನು ಅಭಿಷೇಕಿಸಿ ಇಸ್ರಾಯೇಲ್ಯರ ಅರಸನನ್ನಾಗಿ ಮಾಡಿದವನೂ ಸೌಲನ ಕೈಗೆ ಸಿಕ್ಕದಂತೆ ತಪ್ಪಿಸಿದವನೂ ನಾನೇ. ಇದಲ್ಲದೆ ನಾನು ನಿನಗೆ ನಿನ್ನ ಯಜಮಾನನ ಮನೆಯನ್ನು ಒಪ್ಪಿಸಿದನು; ಅವನ ಹೆಂಡತಿಯರನ್ನು ನಿನ್ನ ಮಗ್ಗಲಿಗೆ ಕೊಟ್ಟೆನು. ಇಸ್ರಾಯೇಲ್ ಮತ್ತು ಯೆಹೂದ ಕುಲಗಳನ್ನು ನಿನಗೆ ವಶಪಡಿಸಿದನು. ಇದು ಸಾಕಾಗಿರದಿದ್ದರೆ ನಾನು ನಿನಗೆ ಇನ್ನೂ ಬೇಕಾದದ್ದನ್ನು ಕೊಡುತ್ತಿದ್ದೆನು. ಹೀಗಿರಲು ನೀನು ಯೆಹೋವನಾದ ನನ್ನ ಆಜ್ಞೆಯನ್ನು ತಿರಸ್ಕರಿಸಿ ನನ್ನ ದೃಷ್ಟಿಯಲ್ಲಿ ಕೆಟ್ಟದ್ದಾಗಿರುವದನ್ನು ಮಾಡಿದ್ದೇನು? ನೀನು ಹಿತ್ತಿಯನಾದ ಊರೀಯನನ್ನು ಕತ್ತಿಯಿಂದ ಕೊಲ್ಲಿಸಿ ಅವನ ಹೆಂಡತಿಯನ್ನು ನಿನ್ನ ಹೆಂಡತಿಯನ್ನಾಗಿ ತೆಗೆದುಕೊಂಡಿ ... (12:7-9).

ದೇವರು ದಾವೀದನಿಗೆ ಎಲ್ಲವನ್ನು ನೀಡಿದ್ದನು. ಅವನಿಗೆ ಅವಶ್ಯವಿದ್ದಿದ್ದರೆ ದೇವರು ಅವರಿಗೆ ಇನ್ನು ಹೆಚ್ಚಾಗಿ ದಯಪಾಲಿಸುತ್ತಿದ್ದನು. ದಾವೀದನು ತೃಪ್ತನಾಗಿರಲಿಲ್ಲ, ಆದಾಗ್ಯೂ, ಅವನು ಮತ್ತೊಬ್ಬನಿಗೆ ಸೇರಿದ್ದನು ಕದ್ದುಕೊಂಡಿದ್ದನು. ಇದು ಕಠಿಣವಾದ ಸಂದೇಶವಾಗಿತ್ತು, ಆದರೆ ಅದು ಸತ್ಯವಾಗಿತ್ತು, ಮತ್ತು ದಾವೀದನಿಗೆ ಅವಶ್ಯವಾದ ಸಂದೇಶವಾಗಿತ್ತು.

ಧಾರ್ಮಿಕ ಕಥೆಯ ಈ ದಿನಗಳಲ್ಲಿ ನಿನಗೆ ಅವಶ್ಯವಿರುವಂಥ ಯಾವುದೇ ಸಂದೇಶ ವನ್ನು ನೀನು ಪಡೆಯಬಹುದು. ನಿನ್ನ ಜೀವಿತದಲ್ಲಿ ಎಲ್ಲವೂ ಚನ್ನಾಗಿದೆ ಎಂಬ ಸಂದೇಶವನ್ನೂ ಸಹ ಪಡೆಯಬಹುದು; ಆದರೆ ನಿನ್ನ ಜೀವಿತವು ಪಾಪದ ದೆಸೆಯಿಂದ ಸಂಕಷ್ಟಕ್ಕೀಡಾಗಿದ್ದರೆ ನಿನ್ನ ನರವನ್ನು ನಯಪಡಿಸುವ ಸಂದೇಶದ ಅವಶ್ಯವಿಲ್ಲ. ಒಂದು ವೇಳೆ ನಾತಾನನು ದಾವೀದನ ಬಳಿಗೆ ಬಂದು ಅವನ ಹೆಗಲಿನ ಮೇಲೆ ಕೈಹಾಕಿ "ನಿನಗೆ ನೋವಾಗಿದೆ ಮತ್ತು ನನಗೂ ನೋವಾ ಗಿದೆ" - ಎಂದು ಪಾಪವನ್ನು ಮರೆಮಾಡಬಹುದಾಗಿತ್ತು? ಆ ಸಂದಿಗ್ಧ ಪರಿಸ್ಥಿತಿಯಲ್ಲಿ ಈ ರೀತಿಯ ಸಂದೇಶದ ಅವಶ್ಯ ದಾವೀದನಿಗೂ ಇರಲಿಲ್ಲ, ಮತ್ತು ನಿನಗೂ ಇದರ ಅವಶ್ಯವಿಲ್ಲ. ನಿನ್ನ ಜೀವಿತ ದಲ್ಲಿರುವ ಪಾಪದ ಕುರಿತಾಗಿ ಯಥಾರ್ಥವಾಗಿ ಯೋಚಿಸುವ ವ್ಯಕ್ತಿಯ ಅವಶ್ಯವಿದೆ - ಪ್ರೀತಿಯ ಯಥಾರ್ಥತೆ, ಆದರೆ ಸಂಪೂರ್ಣ ಯಥಾರ್ಥತೆ!

ಇದು ಕೆಲವರಿಗೆ ಹಿಡಿಸದ ಸಂದೇಶವಾಗಿರಬಹುದು, ಆದರೆ ನಾನು ಪಾಪವನ್ನು ವಿರೋಧಿ ಸುತ್ತೇನೆ. ಪಾಪವು ವೈರಿಯಾಗಿದೆ. ಇದು ಹಳೆಯ - ಮಾದರಿಯ ಸಂದೇಶವಾಗಿರಬಹುದು,

ಆದರೆ ನಾನು ಕುಡಿತಕ್ಕೆ, ಮಾದಕವಸ್ತುಗಳ ಸೇವನೆಗೆ ನೃತ್ಯಕ್ಕೆ, ಜೂಜಾಡುವುದಕ್ಕೆ, ಗರ್ಭಪಾತಕ್ಕೆ, ಮರ್ಯಾದೆ ಹೀನ ಪೋಷಾಕಗಳಿಗೆ ದೇವರ ವಾಕ್ಯಕ್ಕೆ ವಿರೋಧವಾದ ವಿಚ್ಛೇದನಕ್ಕೆ, ವಸ್ತು ಆಶೆಗಳಿಗೆ, ಕಾಮಾಭಿಲಾಶೆಗೆ, ಅಪನಂಬಿಗಸ್ತಿಕೆಯ ದಾಂಪತ್ಯದ ಜೀವನಕ್ಕೆ, ತಪ್ಪು ಸಿದ್ಧಾಂತಗಳಿಗೆ, ಇನ್ನೂ ಇತರೆ ವಿಷಯಗಳಿಗೆ ವಿರೋಧವಾಗಿ ಬೋಧಿಸುತ್ತೇನೆ. ಇವುಗಳಿಗೆ ಮಾತ್ರ ವಿರೋಧವಾಗಿರದೆ ಇನ್ನೂ ಸಾವಿರಾರು ಬೈಬಲಿನ ತಲೆಬರಹಗಳ ವಿಷಯವಾಗಿ ಬೋಧಿಸುತ್ತೇನೆ. ಆ ವಿಷಯಗಳಲ್ಲಿ ನನಗೆ ಮನವರಿಕೆಯಾಗಿದೆ, ನನಗೆ ಸರಿತೋರಿದ ವಿಷಯಗಳನ್ನು ನಾನು ಮರೆ ಮಾಡುವದಿಲ್ಲ.

ಅದು ನನಗೆ ಅವಶ್ಯವಿಲ್ಲ ಎಂಬುದು, "ನಿನ್ನ ಪ್ರತಿಕ್ರಿಯೆಯಾಗಿರಬಹುದು. ನನಗೆ ಖಂಡನೆಯ ಮಾತು ಬೇಡ. ನನಗೆ ಮದುರವಾದ ಬೆಳಕಿನ ಸಂದೇಶ ಬೇಕು." ನಾನು ಪುನರಾವರ್ತಿಸುತ್ತೇನೆ: ನಿಮ್ಮ ಜೀವಿತ ಪಾಪದ ಸಂಕಷ್ಟದಲ್ಲಿ ಸಿಕ್ಕಿಕೊಂಡಿರುವಾಗ, ನಿಮಗೆ ಅತಿ *ಅವಶ್ಯವಿರುವ* ಸಂಗತಿ ಒಬ್ಬ ಯಥಾರ್ಥನಾದ ವ್ಯಕ್ತಿ.

**ಅವನಿಗೆ ಮುರಿದ ಮನಸ್ಸಿನ ಅವಶ್ಯವಿತ್ತು**

ಬರಿಯ ಒಂದು ಯಥಾರ್ಥವಾದ ಸಂದೇಶ ಮಾತ್ರವಲ್ಲ. ಅದನ್ನು ಸರಿಯಾದ ಮನೊಭಾವನೆಯಿಂದ ಸ್ವೀಕರಿಸದೇ ಇದ್ದಿದ್ದರೆ ಅದರಿಂದ ಯಾವ ಪ್ರಯೋಜನವೂ ಉಂಟಾಗುತ್ತಿರಲಿಲ್ಲ. ದಾವೀದನಿಗೆ ಮುರಿದ ಮನಸ್ಸಿನ ಅವಶ್ಯವಿತ್ತು.

ದಾವೀದನು, ನಾತಾನನ ಸಂದೇಶಕ್ಕೆ ವಿವಿಧ ರೀತಿಯಲ್ಲಿ ಪ್ರತಿಕ್ರಿಯೆ ತೋರಿರಬಹುದು. ಪ್ರಸಂಗಿಯ ಬಗ್ಗೆ ಕೋಪ ಹೊಂದಿರಲೂ ಸಾಧ್ಯವಿತ್ತು. ಅದು ಅಸಹಜವಾದ ಪ್ರತಿಕ್ರಿಯೆಯಾಗಿರಲಿಲ್ಲ. ಒಂದು ವೇಳೆ ಅನೇಕ ಕಾರಣಗಳನ್ನು ಸಹ ನೀಡಬಹುದಾಗಿತ್ತು. "ಇದು ಬೆತ್ಷೆಬಳು ಸ್ನಾನ ಮಾಡುತ್ತಿದ ಸ್ಥಳ ಸರಿಯಾದ ಸ್ಥಳವಲ್ಲ ಎಂಬ ಕಾರಣ" ಅಥವಾ "ಊರೀಯನೂ ಅಷ್ಟು ಕಾರಣವಾಗಿ ಇರದಿದ್ದರೆ, ಅವನು ಇನ್ನೂ ಬದುಕಿ ಉಳಿಯುತ್ತಿದ್ದ" ಎನ್ನುವ ಕಾರಣ ನಮ್ಮ ತಪ್ಪುಗಳಿಗೆ ಇತರರನ್ನು ನಿಂದಿಸುವುದು? ಸಹಜವಾದ ಸಂಗತಿ, ಆದರೆ ಈ ಕಾರಣಗಳು ದಾವೀದನ ಪಾಪದ ಸಂಕಷ್ಟವನ್ನು ಪರಿಹಾರಮಾಡಲಿಲ್ಲ. ಒಂದು ವೇಳೆ ದಾವೀದನು ಇನ್ನೊಂದು ಪಾಪದಿಂದ ತನ್ನ ಪಾಪವನ್ನು ಮರೆಮಾಡುವದರಲ್ಲೇ ಮುಂದುವರಿಯಬಹುದಾಗಿತ್ತು. ಇದರ ನಿಮಿತ್ತ ಪ್ರಾಚ್ಯ ಅಧೀಶ್ವರನ ಮಹಾ ಶಕ್ತಿಯ ಅವಸಾನವು ನಾತಾನನಿಂದ ಉಂಟಾಗಬಹುದಾಗಿತ್ತು.

ಅದರೆ ದಾವೀದನೂ ಯಾವುದೇ ಕಾರಣಕ್ಕೂ ಈ ರೀತಿಯ ಪ್ರತಿಕ್ರಿಯೆಯನ್ನು ನೀಡದೆ ಮನಮುರಿದವನಾದನು. ಅವನು ಪರಿಪೂರ್ಣನಾಗಿದ್ದರಿಂದ ದೇವರ ಹೃದಯಕ್ಕೆ ಹತ್ತಿರವಾಗಿರಲಿಲ್ಲ, ಆದರೆ ಅವನಿಗೆ ಸ್ಪರ್ಷಿಸುವಂಥ ಹೃದಯ ಇದ್ದದ್ದರಿಂದ ಮಾತ್ರ. 2 ಸಮುವೇಲ 12:13ರನ್ನು ಗಮನಿಸಿ, ಆಗ ದಾವೀದನು ನಾತಾನನಿಗೆ: "ನಾನು ಯೆಹೋವನಿಗೆ ವಿರುದ್ಧವಾಗಿ ಪಾಪಮಾಡಿದ್ದೇನೆ" ಎಂದು ಹೇಳಿದನು. ಈ ಸರಳವಾದ ಪಾಪದ ಅರಿಕೆಯನ್ನು 51ನೇ ಕೀರ್ತನೆಯಲ್ಲಿ ವಿವರವಾಗಿ ವರ್ಣಿಸಲಾಗಿದೆ. ಈ ಕೀರ್ತನೆಯ ಪೂರ್ವದ ತಲೆಬರಹ ಈ ರೀತಿಯಿದೆ. "ದಾವೀದನು ಬೆತ್ಷೆಬಳ ಬಳಿಗೆ ಹೋದ ಮೇಲೆ ಪ್ರವಾದಿಯಾದ ನಾತಾನನು ಅವನ ಹತ್ತಿರ ಬಂದಾಗ ದಾವೀದನು ರಚಿಸಿದ ಕೀರ್ತನೆ." ದಾವೀದನು ತನ್ನ ಹೃದಯವನ್ನು ಹೊರ ಚೆಲ್ಲಿದನು:

ಪ್ರೀತಿಸ್ವರೂಪನಾದ ದೇವರೇ, ನನ್ನನ್ನು ಕರುಣಿಸು;
ಕರುಣಾನಿಧಿಯೇ, ನನ್ನ ದ್ರೋಹವನ್ನೆಲ್ಲಾ ಅಳಿಸಿ
 ಬಿಡು.
ನನ್ನ ಪಾಪವನ್ನು ಸಂಪೂರ್ಣವಾಗಿ ತೊಳೆದು
 ಬಿಡು;

ನನ್ನ ದೋಷವನ್ನು ಪರಿಹರಿಸಿ ನನ್ನನ್ನು ಶುದ್ಧಿಗೊಳಿಸು.
ನಾನು ದ್ರೋಹಿ ಎಂದು ನಾನೇ ಒಪ್ಪಿಕೊಂಡಿದ್ದೇನೆ;

ನನ್ನ ಪಾಪವು ಯಾವಾಗಲೂ ನನ್ನ ಮುಂದೆ ಇದೆ ...

ನನ್ನ ದೋಷಕ್ಕೆ ವಿಮುಖನಾಗು;
ನನ್ನ ಪಾಪಗಳನ್ನೆಲ್ಲಾ ಅಳಿಸಿಬಿಡು.
ದೇವರೇ, ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು;
ನನಗೆ ಸ್ಥಿರಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನ
ಪಡಿಸು.
ನಿನ್ನ ಸನ್ನಿಧಿಯಿಂದ ನನ್ನನ್ನು ತಳ್ಳಬೇಡ; ...
ನಿನ್ನ ರಕ್ಷಣಾನಂದವನ್ನು ನಾನು ತಿರುಗಿ ಅನುಭವಿಸುವಂತೆ
ಮಾಡು;
ನನ್ನಲ್ಲಿ ಸಿದ್ಧ ಮನಸ್ಸನ್ನು ಹುಟ್ಟಿಸಿ ನನಗೆ ಆಧಾರನಾಗು (ಕೀರ್ತನೆ 51:1-3, 9-12).

"ನನಗೆ ಈ ರೀತಿಯಾದ ಮನಸ್ಸು ಇದೆಯೋ?" ಎಂದು ನಾವು ಪ್ರಶ್ನಿಸಿಕೊಳ್ಳಬೇಕು. ನಮ್ಮ ಹೃದಯಗಳು ಇಂಥ ಪರಿಸ್ಥಿತಿಯಲ್ಲಿ ಸಿಲುಕಿದಾಗ, ಯಾರು ಇದನ್ನು ಸರಬರಾಜು ಮಾಡುವಕ್ಕೆ ಸಾಧ್ಯವಿಲ್ಲ ಆದರೆ ನಾವೇ ಇದನ್ನು ಹೊಂದಿರುತ್ತೇವೆ. ಅಥವಾ ಹೊಂದಿರುವದಿಲ್ಲ ನಾವು ಇಂಥ ಹೃದಯವನ್ನು ಹೊಂದಿಕೊಳ್ಳಲು ಮನಸ್ಸಿಲ್ಲದೆ ಹೋದರೆ ನಮಗೆ ಯಾವ ವಿಧವಾದಂಥ ಕ್ಷಮಾಪಣೆಯ ನಿರೀಕ್ಷೆಯೂ ಇರುವದಿಲ್ಲ.

**ದಾವೀದನಿಗೆ ಕ್ಷಮಾಪಣೆಯ ಭರವಸೆ ಅವಶ್ಯವಿತ್ತು**

ಮೂರನೆಯದಾಗಿ ದಾವೀದನಿಗೆ ಕ್ಷಮಾಪಣೆಯ ಭರವಸೆಯ ಅವಶ್ಯವಿತ್ತು. ತನ್ನ ಪಾಪವು ಕ್ಷಮಿಸಲ್ಪಟ್ಟಿದೆ ಎಂಬ ಭರವಸೆ ಇಲ್ಲದೆ, ಅವನು ಮುಂದುವರಿಯಲು ಸಾಧ್ಯವಾಗಲಿಲ್ಲ. ಕೀರ್ತನೆ 51:11ರಲ್ಲಿ ಪುನ ಗಮನಿಸಿ: "ನಿನ್ನ ಸನ್ನಿಧಿಯಿಂದ ನನ್ನನ್ನು ತಳ್ಳಬೇಡ, ನಿನ್ನ ಪರಿಶುದ್ಧಾತ್ಮನನ್ನು ನನ್ನಿಂದ ತೆಗೆಯಬೇಡ" ಸೌಲನಿಂದ ಪರಿಶುದ್ಧಾತ್ಮನು ತೆಗೆಯಲ್ಪಟ್ಟಾಗ ಅವನಿಗೆ ಉಂಟಾದ ಪ್ರಯಾಸಗಳ ನೆನಪು ದಾವೀದನಿಗೆ ಉಂಟಾಯಿತು (1 ಸಮುವೇಲ 16:14ff). ಸೌಲನು ತನ್ನ ಸ್ಥಿರ ಚಿತ್ತವನ್ನು ಕಳಕೊಂಡಿದ್ದನು. ದಾವೀದನು ಪ್ರತಿರಾತ್ರಿ ಅವನಿಗಾಗಿ ಕಿನ್ನರಿಯನ್ನು ಬಾರಿಸುತ್ತಿದ್ದನು. ಆಗ ಸೌಲನು ಸಮಾಧಾನಗೊಳ್ಳುತ್ತಿದ್ದನು. "ದೇವರೆ ಸೌಲನಿಗಾದ ಗತಿಯು ನನಗಾಗಬಾರದು!" ಎಂದು ದಾವೀದನು ಮೊರೆಯಿಡುತ್ತಿದ್ದನು.

ಆ ಗತಿಯು ದಾವೀದನಿಗೆ ಉಂಟಾಗಲಿಲ್ಲ. ದೇವರು ದಾವೀದನಿಗೆ ಪಾಪ ಕ್ಷಮಾಪಣೆಯ ಭರವಸೆಯನ್ನು ನೀಡಿದನು. ಆಗ ದಾವೀದನು "ನಾನು ಯೆಹೋವನಿಗೆ ವಿರುದ್ಧವಾಗಿ ಪಾಪಮಾಡಿದ್ದೇನೆ" ಅಂದನು. ನಂತರ "ನಾತಾನನು ಅವನಿಗೆ ಯೆಹೋವನು ನಿನ್ನ ಪಾಪವನ್ನು ಕ್ಷಮಿಸಿದ್ದಾನೆ, ನೀನು ಸಾಯುವದಿಲ್ಲ"[22] (2 ಸಮುವೇಲ 12:13) ಅಂದನು. ಪ್ರವಾದಿಯು ಈ ಮಾತುಗಳನ್ನಾಡಿದಾಗ ದಾವೀದನ ಹೃದಯದಲ್ಲಿದ್ದ ಬಾರವು ಇಳಿದು ಹೋಯಿತು. ಆ ಕ್ಷಣ ಅವನಿಗುಂಟಾದ ಸಂತೋಷವನ್ನು 32ನೇ ಕೀರ್ತನೆಯಲ್ಲಿ ನೋಡುತ್ತೇವೆ:

ಯಾವನ ದ್ರೋಹವು ಪರಿಹಾರವಾಗಿದೆಯೋ
ಯಾವನ ಪಾಪವು ಕ್ಷಮಿಸಲ್ಪಟ್ಟಿದೆಯೋ ಅವನೇ
ಧನ್ಯನು.

ಯೆಹೋವನು ಯಾವನ ಲೆಕ್ಕಕ್ಕೆ ಅಪರಾಧವನ್ನು

ಎಣಿಸುವದಿಲ್ಲವೋ
ಯಾವನ ಹೃದಯದಲ್ಲಿ ಕಪಟವಿರುವದಿಲ್ಲವೋ
ಅವನು ಧನ್ಯನು.
[ಹೀಗಿರುವಲ್ಲಿ] ಯೆಹೋವನ ಸನ್ನಿಧಿಯಲ್ಲಿ ನನ್ನ
ದ್ರೋಹವನ್ನು ನಿನಗೆ ಒಪ್ಪಿಕೊಳ್ಳುವೆನು ಅಂದುಕೊಂಡು
ನನ್ನ ಪಾಪವನ್ನು ಮರೆಮಾಡದೆ ನಿನಗೆ ನನ್ನ ದೋಷವನ್ನು
ತಿಳಿಸಿದೆನು.
ನೀನು ನನ್ನ ಅಪರಾಧ ಪಾಪಗಳನ್ನು ಪರಿಹರಿಸಿಬಿಟ್ಟಿ (32:1, 2, 5).

ದಾವೀದನು ಇದಕ್ಕೆ ಯೋಗ್ಯನಾಗಿರಲಿಲ್ಲ. ದೇವರು ತನ್ನ ನಶಿಸಿ ಹೋಗಲಾರದಂಥ ಕರುಣೆಯಿಂದ ಅವನನ್ನು ಕ್ಷಮಿಸಿದನು. ದಾವೀದನು ಮುರಿದ ಹೃದಯವನ್ನು ಹೊಂದಿದ್ದನು. ದಾವೀದನು ಪಶ್ಚಾತಾಪಪಟ್ಟು ದೇವರ ಕಡೆಗೆ ತಿರುಗಿಕೊಂಡದ್ದರಿಂದ, ದೇವರು ಅವನನ್ನು ಕ್ಷಮಿಸಿದನು.

ಇಲ್ಲಿ ದಾವೀದನಿಗೂ ಸೌಲನಿಗೂ ಇದ್ದಂಥ ವ್ಯತ್ಯಾಸವನ್ನು ನೋಡುತ್ತೇವೆ. ನಮ್ಮ ದೃಷ್ಟಿಯ ಪ್ರಕಾರ ಸೌಲನ ಪಾಪವು ದಾವೀದನ ಪಾಪಕ್ಕಿಂತಲು ಘೋರವಾಗಿರಲಿಲ್ಲ. ಆದರೆ ಸೌಲನ ಹೃದಯವು ದೇವರ ಸಮೀಪ ಇರಲಿಲ್ಲ ಸೌಲನು ರಾಜತಂತ್ರದಲ್ಲಿಯೂ ಮುನ್ನುಗ್ಗುವಿಕೆಯಲ್ಲಿಯೂ, ರಾಷ್ಟ್ರ ನಿರ್ಮಾಣದಲ್ಲಿಯೂ, ಆಸಕ್ತನಾಗಿದ್ದನು. ದೇವರ ಪ್ರವಾದಿಯಿಂದ ಎಚ್ಚರಿಸಲ್ಪಟ್ಟಾಗ ದೇವರು ಏನು ಹೇಳುತ್ತಾನೆ ಎಂದು ಯೋಚಿಸದೆ, ಮನುಷ್ಯರು ಏನು ಹೇಳುತ್ತಾರೆ ಎಂದು ಯೋಚಿಸಿದನು. ದಾವೀದನು ಭಯಂಕರ ಪಾಪಮಾಡಿದ್ದಾಗ್ಯೂ ದೇವರ ಮತ್ತು ಆತನ ಅನ್ಯೋನ್ಯತೆಯ ಕುರಿತಾಗಿ ಯೋಚಿಸುತ್ತಿದ್ದನು. ದೇವರ ಪ್ರವಾದಿಯಿಂದ ಎಚ್ಚರಿಸಲ್ಪಟ್ಟಾಗ, ಅವನಿಗೆ ಅತಿ ಅವಶ್ಯವಿದ್ದದ್ದು, ಪುನ ಸ್ಥಾಪನೆ ಮತ್ತು ಸಂಬಂಧ. ಅವರಿಬ್ಬರಲ್ಲಿಯು ವ್ಯತ್ಯಾಸವಾದ ಹೃದಯಗಳಿದ್ದದ್ದರಿಂದ ಸೌಲನಿಗೆ ಪಾಪಕ್ಷಮಾಪಣೆಯ ಭರವಸೆ ದೊರೆಯಲಿಲ್ಲ. ದಾವೀದನಿಗಾದರೋ ದೊರೆಯಿತ್ತು.

ನಮ್ಮ ಜೀವಿತವು ಪಾಪದನಿಮಿತ್ತ ಯಾವಾಗ ಹತೋಟಿ ತಪ್ಪುತ್ತದೋ, ಆಗ ನಾವು ದೇವರ ಕಡೆಗೆ ತಿರುಗಿಕೊಂಡರೆ ಪಾಪದ ಕ್ಷಮಾಪಣೆಯ ಭರವಸೆ ಮಾತ್ರ ನಮಗೆ ಅವಶ್ಯವಿರುತ್ತದೆ. ಇದು ನಮಗೆ ಭರವಸೆಯನ್ನೂ, ಬಲವನ್ನೂ ನೀಡುತ್ತದೆ. ಕೆಲವರಿಗೆ ದೇವರು ಇಷ್ಟು ಕರುಣಾಮಯಿ ಎಂಬುದಾಗಿ ತಿಳಿಯುವದಕ್ಕೆ ಕಷ್ಟವಾಗುತ್ತದೆ. ನಿಮ್ಮಲ್ಲಿಯೇ ಈ ಪ್ರಶ್ನೆಯನ್ನು ಹಾಕಿಕೊಳ್ಳಿ: "ನಿನ್ನ ಜೀವಿತವು ದಾವೀದನ ಜೀವಿತಕ್ಕಿಂತ ಕೀಳಾಗಿದೆಯೋ - ಅಸೂಯೆ, ವ್ಯಭಿಚಾರ ಸುಳ್ಳು ಮತ್ತು ಕೊಲೆಯಿಂದ ನನ್ನ ಜೀವಿತ ತತ್ತರಿಸಿದ್ದೆನೋ?" ದೇವರು ದಾವೀದನನ್ನು ಕ್ಷಮಿಸಿದ್ದರೆ, ಯಾರನ್ನಾದರು ಅತನು ಕ್ಷಮಿಸುವನು. ನಿನ್ನನ್ನೂ ಸಹ ಕ್ಷಮಿಸುವನು!

ನಾನು ಇದನ್ನು ಹಳೆ ಒಡಂಬಡಿಕೆ ವಾಕ್ಯಗಳ ಆಧಾರದಿಂದ ಹೇಳುತ್ತಿದ್ದೇನೆ, ಎಂದು ಕೆಲವರು ಆಕ್ಷೇಪಣೆ ಮಾಡಬಹುದು. ಹೊಸ ಒಡಂಬಡಿಕೆಯ, ರೋಮಾಪುರ 4:7, 8ನ್ನು ಗಮನಿಸಿ: "ಯಾರು ಅಪರಾಧಗಳು ಪರಿಹಾರವಾಗಿದೆಯೋ, ಯಾರ ಪಾಪಗಳು ಕ್ಷಮಿಸಲ್ಪಟ್ಟಿದೆಯೋ, ಅವರೇ ಧನ್ಯರು. ಕರ್ತನು ಯಾವನ ಪಾಪವನ್ನು ಲೆಕ್ಕಕ್ಕೆ ತರುವದಿಲ್ಲವೋ, ಆ ಮನುಷ್ಯನೇ ಧನ್ಯನು." ಈ ವಾಕ್ಯಗಳ ಮಾತುಗಳು ನಮಗೆ ಪರಿಚಿತವೇ? ಹೌದು ಪರಿಚಯವಿದೆ. ಇದನ್ನು ನಾವು ಈಗ 32ನೇ ಕೀರ್ತನೆಯಲ್ಲಿ ಇದನ್ನು ಓದಿದ್ದೇವೆ.[23] ಹಳೇ ಒಡಂಬಡಿಕೆಯಲ್ಲಿ, ದಾವೀದನು ಹೇಳಿದ್ದೇನೆಂದರೆ, "ನಾವು ದೇವರ ಕಡೆಗೆ ತಿರುಗಿಕೊಂಡರೆ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ ಎಂದು ನನಗೆ ತಿಳಿದಿದೆ!" ಹೊಸ ಒಡಂಬಡಿಕೆಯಲ್ಲಿ ಪೌಲನು ಇದು ನನ್ನಲ್ಲಿಯು ಸಂಭವಿಸಿತು. ಈ ಕಾರ್ಯ ಈಗಲೂ

"ಸತ್ಯವಾಗಿರುವದರಿಂದ ದೇವರಿಗೆ ಸ್ತೋತ್ರ!"

ಈ ಮೊದಲು ನಾನು ನಾಣ್ಯದ ಒಂದು ಮುಖವನ್ನು ಮಾತ್ರ ಪರಿಚಯಿಸಿದ್ದೆ: ಪ್ರತಿಯೊಬ್ಬರೂ ಸಹ ಅವರ ಆತ್ಮೀಕ ಸನ್ನಿವೇಶಗಳಲ್ಲಿ ಯಥಾರ್ಥರು ಮತ್ತು ಯೋಗ್ಯರೂ ಆಗಿರಬೇಕಾಗುತ್ತದೆ. ಈಗ ನಾನು ನಾಣ್ಯದ ಇನ್ನೊಂದು ಮುಖವನ್ನು ಪ್ರಯೋಚಿಸುತ್ತಿದ್ದೇನೆ. ಒಬ್ಬನು ಪಶ್ಚಾತ್ತಾಪಪಟ್ಟು ಬದಲಾದರೆ ಅವನು ಕ್ಷಮಿಸಲ್ಪಡುತ್ತೇನೆ ಎಂದು ಎಲ್ಲರೂ ತಿಳಿದಿರಬೇಕು. ನಾನು ಅನೇಕ ವರ್ಷಗಳಿಂದ ಒಂದು ಬಲವಾದ ಮತ್ತು ಮನವರಿಕೆಗೆ ಒಳಗಾದ ಸಭೆಯವರಿಗೆ ದೇವರ ವಾಕ್ಯವನ್ನು ನೀಡುತ್ತಾ ಬಂದಿರುವದು ನನಗೆ ಒಂದು ಅವಕಾಶವಾಗಿದೆ. ಇವರುಗಳು ಬೋಧನೆಯಲ್ಲಿಯೂ ನೈತಿಕತೆಯಲ್ಲಿಯೂ ಯಾವುದು ಸರಿ, ಯಾವುದು ತಪ್ಪು ಎಂದು ಮನವರಿಕೆವುಳ್ಳವರಾಗಿದ್ದಾರೆ. ಈ ಸಭೆಯವರು ದೇವರ ಕೃಪೆ ಮತ್ತು ಕರುಣೆಯಲ್ಲಿ ನಂಬಿಕೆ ಇಟ್ಟಿರುವಂಥದ್ದು; ನನಗೆ ಚೈತನ್ಯವನ್ನು ನೀಡುತ್ತದೆ. ಜನರು ತಮ್ಮ ಪಾಪಕ್ಕಾಗಿ ಮಾನಸಾಂತರ ಪಟ್ಟು ದೇವರ ಕಡೆಗೆ ತಿರುಗಿಕೊಂಡಾಗ, ಇವರು ಅವರನ್ನು ಪ್ರೀತಿಯಿಂದ ಕ್ಷಮಿಸಿದರು. ಮಾನಸಾಂತರದಿಂದ ಕಣ್ಣೀರು ಸುರಿಸಿ ಅವರು ತಿರುಗಿಕೊಂಡಾಗ, ಅವರನ್ನು ಸ್ವೀಕರಿಸಿದವರೂ ಸಹ ಕಣ್ಣೀರು ಸುರಿಸಿದರು!

ಪಾಪ ಮಾಡಿದವರಿಗೆ ವಿರುದ್ಧವಾಗಿ ಭಲವಾದ ಕ್ರಮಗಳನ್ನು ತೆಗೆದುಕೊಳ್ಳುವದು ಮತ್ತು ಪ್ರೀತಿಯಿಲ್ಲದೆ, ತೀರ್ಪುನೀಡುವಂತೆ, ಮತ್ತು ತಮ್ಮ ಪರಿಪೂರ್ಣತೆಗೆ ದಕ್ಕೆ ಬರಬಹುದು ಎಂದು ಪಾಪ ಮಾಡಿದವರನ್ನು ಖಂಡಿಸುವುದು ಮತ್ತು ಸ್ವೀಕರಿಸದೇ ಇರುವುದು ಬಹಳ ಸುಲಭವಾದದ್ದು, ನಾನು ಯಾವ ಸಭಿಕರಿಗೆ ದೇವರ ವಾಕ್ಯವನ್ನು ಬೋಧಿಸುತ್ತಿರುವೆನೋ ಆ ಸಭೆಯಲ್ಲಿ ಕೂಡಿಬರುತ್ತಾ ಇದ್ದಂತವರು ಒಂದು ಕಾಲದಲ್ಲಿ ಪಾಪದಲ್ಲಿ ತುಂಬಿದವರಾಗಿದ್ದರು.[24] ಈ ವಿಷಯ ನಿಮಗೆ ಅಘಾತ ನೀಡಬಹುದು. ನಾನು ಅವರಿಗೆ ವಾಕ್ಯವನ್ನು ಸಾರುವಾಗ ಕೆಲವರು ಪಾಪದಲ್ಲಿ ತೊಳಲುತ್ತಿದ್ದರು (ಯಾಕೋಬ 1:14), ಆದರೆ ಪ್ರತಿಯೊಬ್ಬನು ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರುಳುಗೊಂಡವನಾಗಿ ಪ್ರೇರೇಪಿಸಲ್ಪಡುತ್ತೇನೆ, ನಾವೆಲ್ಲರೂ ಪಾಪದ ನಿಮಿತ್ತ ಹೋರಟ ಮಾಡುತ್ತೇವೆ (ರೋಮಾಪುರ 3:23). ದೇವರು ಹೇಳಿದ್ದನೇ ಮಾಡಿ ಎಂದು ನಾವು ನಿಮಗೆ ಆಹ್ವಾನಿಸುತ್ತೇವೆ. ಇದರ ಹೊರತು ದೇವರಿಗೆ ಬೇರೆ ಮಾರ್ಗದ ಅವಶ್ಯಕಥೆಯಿಲ್ಲ (ಮತ್ತಾಯ 7:21ff) - ಆದರೆ ಅದೇ ಸಮಯದಲ್ಲಿ, ನಾವು ನಮ್ಮ ಅಪೂರ್ಣತೆಯನ್ನು ಸಹ ಒಪ್ಪಿಕೊಳ್ಳಬೇಕು. ನಾವು ಪಾಪ ಮಾಡಿದಾಗ ಮಾನಸಾಂತರ ಪಟ್ಟು ನಮ್ಮ ಪಾಪಗಳನ್ನು ಅರಿಕೆಮಾಡಿ, ದೇವರ ಕ್ಷಮಾಪಣೆಗಾಗಿ ಬೇಡಿಕೊಳ್ಳಬೇಕು (ಅಪೋಸ್ತಲರಕೃತ್ಯಗಳು 8:22; 1 ಯೋಹಾನ 1:9; ಯಾಕೋಬ 5:16), ಆತನು ಕ್ಷಮಾಪಣೆಯನ್ನು ನೀಡುವನು ಎಂದು ನಂಬಬೇಕು. ಜೊತೆ ಹೋರಾಟಗಾರರಾಗಿ, ನಾವು ಒಬ್ಬರನ್ನೊಬ್ಬರು ಉತ್ತೇಜನ ಪಡಿಸಿಕೊಳ್ಳಬೇಕು, ಮತ್ತು ಸಂತೈಸುವಿಕೆಯಿಂದ ಇತರರನ್ನೂ ಸಹ ಭಲಪಡಿಸಬೇಕು.

**ಆತನು ಮುಂದುವರಿಯಲು ನಿರಂತರವಾದ ಭಲದ ಅವಶ್ಯವಿತ್ತು**

ನೀವು ಕ್ಷಮಿಸಲ್ಪಟ್ಟಾಗ, ಎಲ್ಲಾ ವಿಷಯಗಳು ಅಂತ್ಯವಾದವು ಮತ್ತು ಪಾಪವು ನಡೆಯಲೇ ಇಲ್ಲ ಎಂಬ ಪರಿಸ್ಥಿತಿಗೆ ಬಂದಿರುವಿರಿ ಎಂದು ಹೇಳಲು ನಾನು ಇಚ್ಛಿಸುತ್ತೇನೆ. ಆದರೆ ದೈವ ವಶಾತ್, ಅದು ಆ ರೀತಿ ಇರುವದಿಲ್ಲ ಒಂದು ಕ್ಷಣದಲ್ಲಿಯೇ ನೀವು ಕ್ಷಮಿಸಲ್ಪಡುತ್ತೀರಿ, ಆದರೆ ಅದರಿಂದ ಸಂಪೂರ್ಣವಾಗಿ ಹೊರಗೆ ಬರಲು ವರುಷಗಳೇ ಕಳೆಯಬಹುದು. ನಾವು ಈ ರೀತಿಯಾಗಿ ಓದುತ್ತೇವೆ, "ನಿಮ್ಮ ಪಾಪವು ನಿಮ್ಮನ್ನು ಹಿಡಿಯುವ ತನಕ ಹುಡುಕಿಕೊಂಡೇ ಬರುವದು" (ಅರಣ್ಯಕಾಂಡ 32:23) ಮತ್ತು "ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು" (ಗಲಾತ್ಯ 6:7). ದಾವೀದನು ಊರೀಯನನ್ನು ಕೊಲ್ಲಲು ಕತ್ತಿಯನ್ನು ಉಪಯೋಗಿಸಿದ್ದನು. ಈಗ ಅವನು ಏನನ್ನು ಬಿತ್ತಿದನೋ; ಅದನ್ನೇ ಕೊಯ್ಯಬೇಕಾಯಿತು.[25] ನಾತಾನನು ಅವನಿಗೆ ಹೇಳಿದ್ದೇನೆಂದರೆ:

... ನೀನು ಹಿತ್ತಿಯನಾದ ಊರೀಯನನ್ನು ಕತ್ತಿಯಿಂದ ಕೊಲ್ಲಿಸಿ ಅವನ ಹೆಂಡತಿಯನ್ನು ನಿನ್ನ ಹೆಂಡತಿಯನ್ನಾಗಿ ತೆಗೆದುಕೊಂಡಿ. ನೀನು ನನ್ನ ಆಜ್ಞೆಯನ್ನು ತಿರಸ್ಕರಿಸಿದದರಿಂದಲೂ ಹಿತ್ತಿಯನಾದ ಊರಿಯನನ್ನು ಅಮ್ಮೋನಿಯರ ಕತ್ತಿಯಿಂದ ಕೊಲ್ಲಿಸಿ ಅವನ ಹೆಂಡತಿಯನ್ನು ನಿನ್ನ ಹೆಂಡತಿಯನ್ನಾಗಿ ತೆಗೆದುಕೊಂಡದರ್ದಿಂದಲೂ ಕತ್ತಿಯು ನಿನ್ನ ಮನೆಯನ್ನು ಬಿಟ್ಟು ಹೋಗುವದಿಲ್ಲ. ಇದರಿಂದ ನೀನು ನನ್ನ ಆಜ್ಞೆಯನ್ನು ತಿರಸ್ಕರಿಸಿದ್ಧಿ (12:9, 10).

ಮುಂದಿನ ಕೆಲವು ವಚನಗಳು ದಾವೀದನ ಜೀವಿತದ ಕಡೆಯ 20 ವರ್ಷಗಳ ಮುಖ್ಯ ಅಂಶಗಳನ್ನೊಳಗೊಂಡಿರುತ್ತದೆ:

ಯೆಹೋವನಾದ ನನ್ನ ಮಾತನ್ನು ಕೇಳು - ನಾನು ನಿನ್ನ ಮನೆಯವರಿಂದಲೇ ನಿನಗೆ ಕೇಡು ಉಂಟಾಗುವಂತೆ ಮಾಡುವೆನು. ನಿನ್ನ ಹೆಂಡತಿಯರನ್ನು ತೆಗೆದು ನಿನ್ನೆದುರಿನಲ್ಲಿಯೇ ಇನ್ನೊಬ್ಬನಿಗೆ ಕೊಡುವೆನು. ಅವನು ಹಗಲಿನಲ್ಲಿಯೇ ಅವರ ಕೂಡ ಮಲಗುವನು. ನೀನು ಅದನ್ನು ಗುಪ್ತವಾಗಿ ಮಾಡಿದಿ; ನಾನು ಹೇಳುವ ಮಾತಾದರೋ ಎಲ್ಲಾ ಇಸ್ರಾಯೇಲ್ಯರ ಮುಂದೆ ಪ್ರಕಟವಾಗಿ ನೆರವೇರುವದು ಎಂಬದೇ ಅಂದನು. ಆಗ ದಾವೀದನು ನಾತಾನನಿಗೆ - ನಾನು ಯೆಹೋವನಿಗೆ ವಿರುದ್ಧವಾಗಿ ಪಾಪಮಾಡಿ ದ್ದೇನೆ ಎಂದು ಹೇಳಿದನು. ನಾತಾನನು ಅವನಿಗೆ - ಯೆಹೋವನು ನಿನ್ನ ಪಾಪವನ್ನು ಕ್ಷಮಿಸಿದ್ದಾನೆ, ನೀನು ಸಾಯುವದಿಲ್ಲ; ಆದರೂ ನೀನು ಈ ಕೃತ್ಯದಿಂದ ಯೆಹೋವನ ವೈರಿಗಳು ಆತನನ್ನು ಬಹಳ ವಾಗಿ ನಿಂದಿಸುವದಕ್ಕೆ ಆಸ್ಪದ ಕೊಟ್ಟದ್ದರಿಂದ ನಿನ್ನಿಂದ ಹುಟ್ಟಿರುವ ಮಗುವು ಸತ್ತೇ ಹೋಗುವದು ಎಂದು ಹೇಳಿ ಮನೆಗೆ ಹೊರಟು ಹೋದನು (12:11-14).

ಕೊನೆಯದಾಗಿ ಇಂಥ ಒಂದು ಭಯಾನಕ ಪ್ರವಾದನೆ ತಕ್ಷಣವೇ ಜರುಗಿತು. ದಾವೀದನ ಅಮೂಲ್ಯವಾದ ಮಗುವು ಅನಾರೋಗ್ಯದಿಂದ ಬಳಲಿ ಅಸುನೀಗಿತು.[26] ನಮ್ಮ ಮುಂದಿನ ಅಧ್ಯಯನ ದಾವೀದನ ಮನೆಯಿಂದಲೇ ಉಂಟಾದ "ಕೆಡುಕಿನ" ಕುರಿತಾಗಿರುತ್ತದೆ: ದಾವೀದನ ಮಕ್ಕಳೇ ಅವನನ್ನು ಗೌರವಿಸಲಿಲ್ಲ; ದಾವೀದನ ಸುಮಾರ್ತೆಯಾದ ತಾಮರಳು ಅವನ ಮಗನಾದ ಅಮ್ಮೋನನಿಂದಲೇ ಕೆಡಿಸಲ್ಪಟ್ಟಳು; ಈ ಕಾರ್ಯದ ನಿಮಿತ್ತ ದಾವೀದನ ಇನ್ನೊಬ್ಬ ಮಗನಾದ ಅಬ್ಷಾಲೋಮನು ಅಮ್ಮೋನನನ್ನು ಕೊಂದನು; ಅಬ್ಷಾಲೋಮನು ತಂದೆಗೆ ತಿರುಗಿ ಬಿದ್ದಾಗ ಅವನು ಕೊಲ್ಲಲ್ಪಟ್ಟನು. ಅಬ್ಷಾಲೋಮನು ದಾವೀದನಿಗೆ ವಿರುದ್ಧವಾಗಿ ದಂಗೆ ಎದ್ದಾಗ ದಾವೀದನ ಸಮಿಪಸ್ಥನು ಅವನ ಹೆಂಡತಿಯರನ್ನು ಕೂಡುವನು ಎಂಬುದಾಗಿ ನುಡಿದ "ಪ್ರವಾದನೆಯು" ನೆರವೇರಿತು (ಹೋಲಿಸು. 2 ಸಮುವೇಲ 16:22). ಈ ಸಂಚಿಕೆಯ ಕೊನೆಯ ಪಾಠದಲಿ, ಹೇಗೆ ಕತ್ತಿಯು ಪುನ ಪುನ ಜಳಪಿಸುತ್ತಿತ್ತು ಎಂದು ನೋಡುವವರಾಗಿದ್ದೇವೆ.

ತಿರುಗಿ ನಿಮಗೆ ತಿಳಿಸುತ್ತೇನೆ: ಪಾಪವು ಭಯಂಕರವಾದದ್ದು! ಅದು ಕ್ಷಮಿಸಲ್ಪಟ್ಟ ಮೇಲೆ ಭಯಾನಕವಾದದ್ದು, ಅವರ ಕಾರ್ಯವು ಯಾವಾಗಲೂ ಪ್ರತಿಧ್ವನಿಸುತ್ತಿರುತ್ತದೆ! ಆತನ ಪ್ರಾಬಲ್ಯ ಹೊರಟುಹೋಯಿತು. ಮುಗ್ದರು ನೊಂದುಕೊಂಡರು. ಕತ್ತಿಯು ವರ್ಷಗಟ್ಟಲೆ ನೋವುಂಟು ಮಾಡಿತು. ನಮ್ಮ ಯೌವನಸ್ಥ ಮಕ್ಕಳಿಗೆ, "ಪಾಪದಿಂದ ದೂರವಾಗಿರ್ರಿ ಎಂದು ಹೇಳುವುದು ಅಚ್ಚರಿಯೇ ಯೌವನ ಕಾಲದ ಆಕಾಂಕ್ಷೆಗಳು ನಿನ್ನನ್ನು ಪಾಪಕ್ಕೆ ಮುನ್ನಡೆಸದಿರಲಿ, ಶೋಧನೆಯಿಂದ ತಪ್ಪಿಸಿಕೊಳ್ಳಿರಿ." ಅದರ ಪರಿಣಾಮ ಭಯಂಕರವಾದದ್ದು!

ದಾವೀದನಿಗೆ ತಕ್ಷಣವೇ ಕ್ಷಮಾಪಣೆಯ ಅವಶ್ಯವಿತ್ತು. ಅದರ ಜೊತೆಯಲ್ಲಿಯೇ ಪ್ರತಿ ಕತ್ತಲ ರಾತ್ರಿಯನ್ನು ಕಳೆಯಲು ಅನುದಿನದ ಶಕ್ತಿಯ ಅವಶ್ಯವಿತ್ತು.

ದಾವೀದನು *ಹೇಗೆ* ಬದುಕುಳಿದನು? ಆತನ ನಿಶ್ಚಯವಾದ ಪಾಪಕ್ಷಮಾಣೆಯು ಅವನಿಗೆ ಸಹಾಯವಾಗಿತ್ತು (ಕೀರ್ತನೆ 32:1, 2). ಇದರ ಜೊತೆಯಲ್ಲಿ ಪ್ರವಾದಿಯಾದ ನಾತಾನನ ಭರವಸವು ಅವನಿಗೆ ಸಹಾಯ ಮಾಡಿತ್ತು ದೇವರು ಅವನಿಗೆ ನೀಡಿದ ವಾಕ್ಯದ ಪ್ರಕಾರ

ದೇವರೊಂದಿಗಿನ ಸಂಬಂದ ಸುಭದ್ರವಾಗಿತ್ತು. ಮತ್ತು ಅವನ ಮಗುವಿನ ಮರಣದ ನಂತರ, ಬೆತ್ಶೆಬಳಿಗೆ ಇನ್ನೊಂದು ಮಗುವನ್ನು ಅನುಗ್ರಹೀಸುವದರ ಮೂಲಕ ದೇವರು ತನ್ನ ಸಂಬಂಧವನ್ನು ರುಜುವಾತು ಪಡಿಸಿದ್ದನು. ಆ ಮಗುವಿಗೆ ಅವರು ಸೊಲೊಮೋನನೆಂದು ಹೆಸರಿಟ್ಟರು. ಅದರ ಅರ್ಥ "ಪೂರ್ಣಶಾಂತಿ"; ನಾತಾನನು[27] ಅವನನ್ನು "ಯೆದಿಧ್ಯನು" ಎಂದು ಕರೆದನು. ಅದು "ದಾವೀದನು" ಎಂಬ ಹೆಸರಿನ ಮೂಲದಿಂದ ಬಂದದ್ದಾಗಿದೆ ಅದರ ಅರ್ಥ "ಕರ್ತನಿಗೆ ಪ್ರೀಯನು." ಆ ಅಧ್ಯಾಯದ ಕೊನೆಯಲ್ಲಿ ಇನ್ನೊಂದು ರುಜುವಾತನ್ನು ನೋಡುತ್ತೇವೆ: ರಬ್ಬವನ್ನು ವಶಪಡಿಸಿಕೊಳ್ಳವಲ್ಲಿ ದಾವೀದನು ಸಫಲನಾದನು. ಅದು ದಾವೀದನ ಯುದ್ಧದ ಅಂತ್ಯವಾಗಿತ್ತು. ದೇವರೊಂದಿಗೆ ಪುನ ಸ್ಥಾಪಿಸಲ್ಪಟ್ಟ ಸಂಬಂಧವು ಉಳಿದ ಎಲ್ಲಾ ಸಂಗತಿಗಳಿಗಿಂತಲೂ ವಿಶೇಷವಾಗಿತ್ತು. ಈ ವಿಷಯದ ದಾವೀದನಿಗೆ ನಿಶ್ಚಯವಾದಾಗ ಅವನು ಜೀವನದಲ್ಲಿ ಮುನ್ನಡೆಯಲು ಸಾಧ್ಯವಾಯಿತು.

ಈ ಭರವಸೆಯು ಅವನಿಗೆ ಉಂಟಾದಾಗ ಇನ್ನು ಮುಂದೆ ದೇವರು ಇವನನ್ನು ಬಲಪಡಿಸಿ ಸಹಾಯಿಸುತ್ತಾ ಭವಿಷ್ಯದಲ್ಲಿ ನಡಿಸುವನು ಎಂದು ಮನವರಿಕೆಯಾಯಿತು. "ನೀನೇ ನನಗೆ ಮರೆಯು, ನಿರಾಪಾಯವಾಗಿ ನನ್ನನ್ನು ಕಾಯುವಿ." "ವಿಮೋಚನ ಧ್ವನಿಯಿಂದ ನನ್ನನ್ನು ಆದರಿಸಿಕೊಳ್ಳುತ್ತೀ" (ಕೀರ್ತನೆ 32:7).

ದಾವೀದನು ಸ್ನೇಹಿತರ ಸಾನ್ನಿಧ್ಯವು ಸಹ ಅವನು ಬದುಕುಳಿಯುವಂತೆ ಸಹಾಯಮಾಡಿತು. ನಾತಾನನು ದಾವೀದನ ಜೊತೆಯಲ್ಲಿಯೇ ಇದ್ದನು (2 ಸಮುವೇಲ 12:25; 1 ಅರಸು 1:8ff), ದಾವೀದನಿಗೆ ಇತರ ಸ್ನೇಹಿತರಿದ್ದರು - ಅವರಲ್ಲಿ ಚಾದೋಕನು (2 ಸಮುವೇಲ 15:24). ಹೊಷೈ[28] ಮತ್ತು ಮಾಕೀರನು.[29] ದಾವೀದನ ಕೆಟ್ಟದಿವಸಗಳಲ್ಲಿ ಈ ಎಲ್ಲಾ ಸ್ನೇಹಿತರು ಅವನಿಗೆ ಸಹಾಯಕರಾಗಿದ್ದರು.

ದೇವರು ಇದೇ ರೀತಿಯಾದ ಸಹಾಯವನ್ನು ನಮಗೂ ಸಹ ಅನುಗ್ರಹಿಸುವನು. ನಾವು ಮಾನಸಾಂತರ ಪಟ್ಟು ದೇವರ ಚಿತ್ತವನ್ನು ನೆರವೇರಿಸಿದರೆ ನಮಗೆ ಕ್ಷಮಾಪಣೆಯ ವಾಗ್ದಾನವು ದೊರಕುವದು (ಅಪೊಸ್ತಲರಕೃತ್ಯಗಳು 2:38; 1 ಯೋಹಾನ 1:9). ಮುಂದೆ, ದೇವರು ನಮ್ಮೊಂದಿಗಿರುವನು ಎಂದು ಭರವಸೆಯನ್ನು ನೀಡಿದ್ದಾನೆ. "ಕರ್ತನು ನನ್ನ ಸಹಾಯಕನು ಭಯಪಡೆನು" ಮನುಷ್ಯನು ನನಗೆ ಏನು ಮಾಡಾನು? (ಇಬ್ರಿಯ 13:6). ಕೊನೆಯದಾಗಿ, ದೇವರು ನಮಗೆ ಸಹಾಯದ ಗುಂಪನ್ನು ನೀಡಿದ್ದಾನೆ. ಆ ಗುಂಪಿನ ಹೆಸರೇ ಕರ್ತನ ಸಭೆ (ಅಪೊಸ್ತಲರಕೃತ್ಯಗಳು 2:38, 47; 1 ಕೊರಿಂಥ 12:13; ಎಫೆಸ 1:22, 23; 5:23, 25) - ನಾವು ಆ ಸಭೆಯೊಂದಿಗೆ ಕೆಲಸ ಮಾಡ ಬೇಕು ಆರಾಧನೆ ಮಾಡಬೇಕು. ಆಗ ನಮಗೆ ಪ್ರೋತ್ಸಾಹ ಉಂಟಾಗುತ್ತದೆ.[30]

## ಮುಕ್ತಾಯ

ಪವಿಶುದ್ಧಾತ್ಮನು ಬೈಬಲಿನಲ್ಲಿರುವ ಪ್ರಸಿದ್ಧಿ ಪಡೆದ ನಾಯಕರುಗಳ ಚಿತ್ರವನ್ನು ಪ್ರತಿಬಿಂಭಿಸುವಾಗ, ಅವರ ಚಿಕ್ಕ ಚಿಕ್ಕ ಬಲಹೀನತೆಯನ್ನು, ಮತ್ತು ಇತರ ಎಲ್ಲಾ ಸಂಗತಿಗಳನ್ನು ತಿಳಿಸುತ್ತಾನೆ. ಇದು ಕೆಲವರಿಗೆ ಚಿಂತೆ ಉಂಟು ಮಾಡುತ್ತದೆ, ಆದರೆ ಅದು ನನಗೆ ಸಹಾಯಕ ವಾಗಿದೆ. ಪಾಪದ ಮೇಲೆ ಜಯವನ್ನು ಸಾಧಿಸುವಂತ ಬಲಶಾಲಿಗಳು ನಮ್ಮಲ್ಲಿ ಯಾರೂ ಸಹ ಇಲ್ಲವೆಂಬ ಸಂಗತಿ ನನಗೆ ಸಹಾಯಿಸುತ್ತದೆ. ಈ ವಿಷಯ ನನ್ನನ್ನು ಎಚ್ಚರಿಕೆವುಳ್ಳವನ್ನಾಗಿ ಮಾಡುತ್ತದೆ. ನಮ್ಮ ಹೃದಯಗಳು ಮುರಿಯಲ್ಪಟ್ಟಾಗ ಯಾರೂ ಸಹ ಕರ್ತನ ಕ್ಷಮಾಪಣೆಗಿಂತ ಮುಂದೆ ಹೋಗಲು ಸಾಧ್ಯವಿಲ್ಲ. ದೇವರ ಕರುಣೆಗೆ ನನ್ನನ್ನು ಬಲಪಡಿಸಿಕೊಳ್ಳುವಂತೆ ಇದು ನನಗೆ ಸಹಾಯ ಮಾಡುತ್ತದೆ.

ನಾವು ಅಧ್ಯಯನ ಮಾಡಿದ ಬಹುತೇಕ ಕಥೆಯು, ಹೊಲಸಾಗಿ ಕಾಣಿಸುತ್ತದೆ. ಆದರೆ ನಾವು ಸಂತೋಷದ ಅಂತ್ಯವನ್ನು ಪರಿಶೀಲಿಸಿದ್ದೀವಿ ಎಂದು ನಾನು ನಿರೀಕ್ಷಿಸಿದ್ದೇನೆ. ದಾವೀದನು

ದೇವರೊಂದಿಗೆ ಪುನ ಸ್ಥಾಪಿಲ್ಪಟ್ಟನು. ಈ ಎಲ್ಲಾ ಪರಿಶ್ರಮದ ನಡುವೆಯೂ ದಾವೀದನು ಉನ್ನತ ಸ್ಥಿತಿಗೆ ಬಂದನು ಎಂದು ಅವನನ್ನು ಹಿಂಬಾಲಿಸಿದ ಅರಸರುಗಳು ಗ್ರಹಿಸಿಕೊಂಡರು (1 ಅರಸುಗಳು 15:3). ಅವನ ಮರಣವಾಗಿ ಸಾವಿರಾರು ವರ್ಷಗಳು ಕಳೆದರೂ ದೇವರು ಅವನು ನನಗೆ ಒಪ್ಪುವ ಮನುಷ್ಯನು ಎಂದು ಸಾಕ್ಷಿ ಹೇಳಿದನು (ಅಪೋಸ್ತಲರಕೃತ್ಯಗಳು 13:22). ದಾವೀದನಿಗೆ ಸ್ಪರ್ಷಿಸಲ್ಪಡುವಂತ ಹೃದಯವಿತ್ತು.

ನಿಮ್ಮ ಜೀವಿತವು ಯಾವ ಪರಿಸ್ಥಿತಿಯಲ್ಲಿ ಇದೆ ಎಂಬುದು ನಿನಗೆ ತಿಳಿಯದು; ದಾವೀದನು ಬೆತ್ಷೇಬಳೊಂದಿಗೆ ನಡೆಸಿದ ಪಾಪಕೃತ್ಯಕ್ಕಿಂತಲೂ ನಿಮ್ಮ ಪಾಪಗಳ ಕೆಟ್ಟದ್ದಾಗಿರಬಹುದು. ಇದನ್ನು ನಾನು ಖಂಡಿತವಾಗಿ ಹೇಳುತ್ತೇನೆ: ನಿಮ್ಮ ಚರಿತ್ರೆಗೆ ಒಂದು ಸಂತೋಷದ ಅಂತ್ಯವನ್ನು ಕಾಣಬಹುದು. ಆದರೆ ನೀನು ಮಾನಸಾತರ ಪಟ್ಟು ದೇವರ ಕಡೆಗೆ ತಿರುಗಿ ಕೊಂಡು ದೇವರ ಚಿತ್ತವನ್ನು ನೆರೆವೇರಿಸಿದರೆ ಮಾತ್ರ ಇದು ಸಾಧ್ಯ!

---

ಟಿಪ್ಪಣಿಗಳು

[1]ಪಾಠವನ್ನು ವಿವರವಾಗಿ ತೋರಿಸಲು ಮತ್ತು ಪುನ ಇದಕ್ಕೆ ಅನುಗುಣವಾಗುವಂತೆ ತಯಾರಿಸಲಾಗಿದೆ. [2]ಮನೆಯಲ್ಲಿ ಉಳಿದುಕೊಳ್ಳುವದು ದಾವೀದನ ಯೋಜನೆಯಾಗಿರಲಿಲ್ಲ (2 ಸಮುವೇಲ 18:3; 21:17). ಯೆರೂಸಲೇಮಿನಲ್ಲೇ ಉಳಿದುಕೊಳ್ಳುವದ ದಾವೀದನ ಜವಾಬ್ದಾರಿಯುತ ನಿರ್ದಾರವಾಗಿತ್ತು. [3]RSVಯಲ್ಲಿ "ಒಂದು ಮಧ್ಯಾಹ್ನದ ನಂತರ" ಎಂಬುದಾಗಿದೆ. [4]"ಅವನು ನಿದ್ರೆಯಿಂದ ಎದ್ದನು" ಅನ್ನುವುದು ಅವನು ಮಧ್ಯಾಹ್ನ ನಿದ್ರಿಸಿದನು ಎಂದು ಸೂಚಿಸುತ್ತದೆ. [5]ಬೆತ್ಷೇಬಳ ಮುಗ್ದತೆ ಅಥವಾ ಉದ್ದೇಶ ಪೂರ್ವಕದ ಬಗ್ಗೆ ವಾಕ್ಯ ಭಾಗವು ಮೌನವಾಗಿದೆ. ದಾವೀದನು ಪಾಪಮಾಡುವಷ್ಟು ಯಾವ ರೀತಿ ನಡಕೊಂಡಳು ಆಕೆಯು ದಾವೀದನಿಗೆ ಮನಸಾರೆ ಹೊಂದಿಕೊಡಳೂ ಅಥವಾ ಪ್ರತಿಕ್ರಿಯೆ ನೀಡಿದಳೋ? ಆಕೆಯು ನಿಜವಾಗಿ ಉರೀಯನಿಗಾಗಿ ಗೋಳಾಡಿದಳೋ? ನಾವು ಪ್ರಶ್ನೆಗೆ ಉತ್ತರಿಸಲಾಗದು. ಗ್ರಂಥ ಕರ್ತನ ಪ್ರಕಾರ ಇದು *ದಾವೀದನ* ಪಾಪವಾಗಿತ್ತು. *ದಾವೀದನ* ಬಗ್ಗೆ ಗ್ರಂಥ ಕರ್ತನು ಯೋಚಿಸುವವನಾಗಿದ್ದಾನೆ. [6]ಬೆತ್ಷೇಬಳು ಎಲ್ಲಿ ಸ್ನಾನ ಮಾಡುತ್ತಿದ್ದಳು ದಾವೀದನು ಅವಳನ್ನು ನೋಡಲು ಹೇಗೆ ಸಾಧ್ಯವಾಯಿತ್ತು ಎಂದು ನಮಗೆ ತಿಳಿದಿರುವದಿಲ್ಲ. ಆಕೆಯು ಮಾಡುತ್ತಿದ ಕಾರ್ಯವೇನು ಎಂಬುದಾಗಿ ತಿಳಿದಿಲ್ಲ. ಆಕೆಯು ತನ್ನ ದೇಹದ ಒಂದು ಭಾಗವನ್ನು ಮಾತ್ರ ತೊಳೆದು ಕೊಳ್ಳುತಿದ್ದಳು. ಆಕೆಯು ಪೂರ್ಣ ಬೆತ್ತಲೆಯಾಗಿರಲಾರಳು. ಬೆತ್ಷೇಬಳು ದಾವೀದನನ್ನು ವಶಮಾಡಿಕೊಳ್ಳಲು ಬಲೆ ಬೀಸಿದಳು ಎಂದು ತಿಳಿಯಲಾಗದು. [7]ಎರಡು ಸಮುವೇಲ 11:4 "ದಾವೀದನು ಆಗಲೇ ಋತುಸ್ನಾನ ಮಾಡಿಕೊಂಡಿದ್ದ ಆಕೆಯನ್ನು ದೂತರ ಮುಖಾಂತರವಾಗಿ ಕರೇಕಳುಹಿಸಿದನು. ಆಕೆಯು ಬರಲು ಆಕೆಯನ್ನು ಕೂಡಿದನು." ASVಯಲ್ಲಿ "ಆಕೆಯೊಂದಿಗೆ ಮಲಗಿದನು" (ಅವಳು ಋತು ಸ್ನಾನಮಾಡಿ ಶುದ್ಧಿಯಾದಳು) (KJV ಮತ್ತು NKJVಯನ್ನೂ ಸಹ ನೋಡಿರಿ). RSV ಈ ರೀತಿ ಹೇಳುತ್ತದೆ. "(ಈಗ ಅವಳು ತನ್ನ ಅಶುದ್ಧತೆಯನ್ನು ತಾನಾಗಿ ಶುದ್ಧಿಮಾಡಿ ಕೊಂಡಳು.)" NIVಯಲ್ಲಿ "(ಅಶುದ್ಧತೆಯನ್ನು ಶುದ್ಧಿ ಮಾಡಿಕೊಂಡಳು)" "(ಆಕೆ ತನ್ನ ಮನೆಗೆ ಹಿಂದಿರುಗಿದಳು, ಅಶುದ್ಧತೆ ಅಂದರೆ ಆಕೆಯ ತಿಂಗಳಿನ ಋತು ಸ್ರಾದ.)" ಈ ಸಮಯದಲ್ಲಿ 7ದಿವಸಗಳ ಕಾಲ ಸ್ತ್ರೀಯರು "ಅಶುದ್ಧರಾಗಿರುವರು" (ಯಾಜಕಕಾಂಡ 15:19-24). ಆಕೆಯ ಋತುಕಾಲ ಮುಗಿದ ತಕ್ಷಣ ವ್ಯಭಿಚಾರದ ಕಾರ್ಯ ನಡೆಯಿತು. ಆಕೆಯು ದಾವೀದನು ಬಳಿಗೆ ಬಂದಾಗ ಗರ್ಭವತಿಯಾಗಿರಲಿಲ್ಲ ಎಂದು ಇದು ಸ್ಪಷ್ಟಪಡಿಸಿತ್ತು. ಅನೇಕ ದಿವಸಗಳಿಂದ ದಾವೀದನು ಆಕೆಯ ವಿಷಯದಲ್ಲಿ ವಿವರೆಣೆ ಕೇಳಿದ್ದನು. ಈ ಕಾರಣದಿಂದ ಆಕೆಯು ಬೇಗನೆ ಗರ್ಭವತಿಯಾದಳು ಎಂದು ವಿವರಿಸಲಾಗಿದೆ. ವಚನ 2ರಲ್ಲಿ ನೋಡುವಂತೆ ಇದು ಆಕೆಯ ಸ್ನಾನದ ವಿವರ. ಆಕೆ ಶುದ್ಧ ಪಡಿಸಿಕೊಳ್ಳವದಕ್ಕಾಗಿ ಸ್ನಾನ ಮಾಡುತ್ತಿದ್ದಳು. ಒಂದು ವೇಳೆ ಅದು ಉದ್ದೇಶ ಪೂರ್ವಕ ಅಥವಾ ಉದ್ದೇಶ ಪೂರ್ವಕವಲ್ಲದ ಕಾರ್ಯವಾಗಿದ್ದರೂ ದಾವೀದನು ಇದರ ಬಗ್ಗೆ ಯೋಚಿಸ ಬೇಕಿತ್ತು. [8]ಆದಿಕಾಂಡ 43:34 ಇಬ್ರೀಯ ಪದದಲ್ಲಿ "ಕಾಣಿಕೆ" ಆಹಾರವಾಗಿರುವುದು. KJV, ASV, ಮತ್ತು NKJV 2 ಸಮುವೇಲ 11:9 ಕಾಣಿಕೆ ಅಂದರೆ ಬಹುಮಾನ ಆಹಾರವನ್ನು ಮನೆಗೆ ತೆಗೆದುಕೊಂಡು ಹೋದದ್ದು. [9]ದಾವೀದನು ತನ್ನ ಅರಮನೆಯ ಮೆಲ್ಚಾವಣಿಯಿಂದ ಆಕೆಯನ್ನು ನೋಡಿದನು. [10]ಫಿಲಿಷ್ಟಿಯರು ವಶಮಾಡಿಕೊಳ್ಳುವಂತೆ ಇಸ್ರಾಯೇಲ್ಯರು ದೇವ ಮಂಜೂಷವನ್ನು ಯುದ್ಧ ಮಾಡುವ ಸ್ಥಳಕ್ಕೆ ತೆಗೆದುಕೊಂಡು ಹೋಗುವ ಪ್ರಯತ್ನ ಮಾಡಿದರು ಎಂದು ಅರ್ಥವಾಗುತ್ತದೋ (1 ಸಮುವೇಲ 4)? ಅದರ ಅಗತ್ಯವಿರಲಿಲ್ಲ - ಮಂಜೂಷವು ತಾತ್ಕಾಲಿಕವಾಗಿ ಯೆರೂಸಲೇಮಿನಲ್ಲಿ ನೆಲಸಿತ್ತು ಮಂಜೂಷವನ್ನು ತೆಗೆದು ಕೊಂಡು ಹೊದರೆ ಒಳ್ಳೆಯದಾಗುತ್ತದೆ.

ಎಂಬ ಉದ್ದೇಶ ದಾವೀದ ನದಾಗಿರಲಿಲ್ಲ ಇದನ್ನು ದಾವೀದನು ತಿಳಿದಿದ್ದನು (ಹೋಲಿಸು 2 ಸಮುವೇಲ 15:25).

[11]2 ಸಮುವೇಲ 11:21, 23, 24; 2 ಸಮುವೇಲ 12:9 ಊರೀಯನು "ಅಮ್ಮೋನಿಯರ ಮಕ್ಕಳ ಕತ್ತಿಯಿಂದ ಸಂಹರಿಸಲ್ಪಟ್ಟನು," ಎಂಬುದನ್ನು ಗಮನಿಸಿ ಇದರ ಅರ್ಥ ಅಮ್ಮೋನಿಯರು ಅವನನ್ನು ಹಾಗೆ ಕೊಂದರು ಎಂಬ ಅರ್ಥ. [12]ಅಭಿಮೆಲೇಕನು ಗೋಡೆಗೆ ಹತ್ತಿರವಾಗಿದ್ದರಿಂದ ಬೀಸುವ ಕಲ್ಲನ್ನು ಅವನ ಮೇಲೆ ಎಸೆದಾಗ ಮರಣಹೊಂದಿದನು ಎಂದು ದಾವೀದನು ತಿಳಿಸುವನು ಎಂದು ಯೋವಾಬನು ಅಂದುಕೊಂಡಿದ್ದನು. ನ್ಯಾಯಸ್ಥಾಪಕರು 9:50-57ರಲ್ಲಿ ಈ ಕಥೆಯಿದೆ ಸೈನ್ಯಾಧಿಕಾರಿಗಳಿಗೆಇದು ಬಹುಶ ಸಾಮಾನ್ಯವಾದ ಪಾಠವಾಗಿತ್ತು. [13]ಆಕೆಯ ಗೋಳಾಟ ಯಥಾರ್ಥವಾಗಿತ್ತು ಅಥವಾ ಯಥಾರ್ಥವಾಗಿರಲಿಲ್ಲ ಎಂಬುದು ತಿಳಿಯದೆ ಹೋದರೂ. ಅಲ್ಲಿ ಸಂದೇಹವಿದೆ. [14]ಮಗುವಿನ ಜನನದ ಸುದ್ದಿಯು ಎಷ್ಟು ದೂರದವರೆಗೂ ಪ್ರಸಾರವಾಯಿತು ಎಂದು: 2 ಸಮುವೇಲ 12:14ರಲ್ಲಿ ಗಮನಿಸಿ. [15]ನೆರೆಯವರಿಗೆ ಕುಡುಸಿ ಅವನನ್ನು ಪಾಪಕ್ಕೆ ನಡಿಸಿವುದು ಮಾತ್ರವಲ್ಲ ನೆರೆಯವರಿಗೆ ಕುಡಿಸಿ ಇತರರು ಪಾಪ ಮಾಡುವುದು (ಹಬ್ಬಕೂಕ 2:15, 16). [16]ಕೀರ್ತನೆ 32 ದಾವೀದನು ಪಾಪ ಮಾಡಿದನಂತರ ಬರೆದ ಕೀರ್ತನೆ ಎಂದು ಬಲವಾದ ಹಿನ್ನೇಲೆ ಹೇಳುತ್ತದೆ. [17]LB ಇದನ್ನು ವಾಕ್ಯಮಾಡಿ ತಿಳಿಸುತ್ತದೆ. [18](2 ಸಮುವೇಲ 7)ರಲ್ಲಿ ದೇವಾಲವನ್ನು ದಾವೀದನು ಕಟ್ಟಲು ಪ್ರಯತ್ನಿಸುತ್ತಿರುವಾಗ, ಅಲ್ಲಿ ನಾತಾನನ ಕುರಿತಾಗಿ ಕಡೆಯದಾಗಿ ನೋಡುತ್ತೇವೆ. [19]ನಮ್ಮಲ್ಲಿರುವ ಪಾಪವನ್ನು ಗಮನಿಸುವದಕ್ಕಿಂತಲೂ ಇತರರಲ್ಲಿರುವ ಪಾಪವನ್ನು ಗಮನಿಸುವುದು ಸುಲಭ. [20]ವಿಮೋಚನಕಾಂಡ 22:1ರಲ್ಲಿ ಅವಶ್ಯವಿರುವ ಕಾರ್ಯ ಇದಾಗಿರುತ್ತದೆ.

[21]ದಾವೀದನು ತನ್ನನ್ನು ತಾನೇ ತನ್ನ ಮಾತುಗಳಿಂದ ಖಂಡಿಸಿಕೊಂಡನು ಅವನೇ ಕರುಣೆಯನ್ನು ತೋರದವನಾಗಿದ್ದನು. [22]ನಾತಾನನ ದೃಷ್ಟಾಂತದ ಐಶ್ವರ್ಯವಂತನನ್ನು ಮರಣದಂಡನೆಗೆ ಅರ್ಹನು ಎಂದು ದಾವೀದನೇ ಖಂಡಿಸಿದ್ದನು. ಅವನು ಮಾಡಿದ ಕ್ರಿಯೆಗೆ ನ್ಯಾಯಯುತವಾಗಿ ಅವನು ಮರಣದಂಡನೆಗೆ ಅರ್ಹಯಾಗಿರಲಿಲ್ಲ. ಆದರೆ ದಾವೀದನು ಮಾಡಿದ ವ್ಯಭಿಚಾರಕ್ಕೂ ಕೊಲೆಗೂ, ದಾವೀದನೇ ಮರಣಕ್ಕೆ ಅರ್ಹನಾಗಿದ್ದನು (ಯಾಜಕಕಾಂಡ 20:10; 24:17), ಆದರೆ ಕರುಣೆಯುಳ್ಳ ದೇವರು ದಾವೀದನಿಗೆ ಈ ತೀರ್ಪಿನಿಂದ ಬಿಡುಗಡೆಯನ್ನು ನೀಡಿದ್ದನು. [23]ಕೀರ್ತನೆ 32:1, 2. ಪದಗಳು ವ್ಯತ್ಯಾಸವಿದೆ, ಯಾಕೆಂದರೆ ಕೀರ್ತನೆ 32 ಇಬ್ರೀಯ ಬಾಷೆಯಿಂದ ತರ್ಜುಮೆಗೊಂಡಿದೆ. ಆದರೆ ಅಪೋಸ್ತಲನಾದ ಪೌಲನು ಗ್ರೀಕ್ ಭಾಷೆಯ (ಸೆಪ್ಟುಜೂಯಂಟ್‌ನಿಂದ) ಆರಿಸಿ ತಿಳಿಸಿದ್ದಾರೆ. [24]ನನ್ನ ಈ ರೀತಿಯ ಪ್ರಸಂಗ ನಿಮಗೆ ದಿಗ್ಭಮೆಗೊಳಿಸುತ್ತದೆ ಎಂದು ನಿರೀಕ್ಷಸುತ್ತೇನೆ ಅಂದರೆ "ನಿನ್ನ ಮುಂದೆ ಕುಳಿತಿರುವವನು ಪಾಪಿ, ನಿನ್ನ ಹಿಂದೆ ಇರುವವನು ಪಾಪಿ, ನಿನ್ನ ಎಡಭಾಗದಲ್ಲಿರುವವನು ಪಾಪಿ, ನಿನ್ನ ಬಲಭಾಗದಲ್ಲಿರುವವನು ಪಾಪಿ, ಒಟ್ಟಿನಲ್ಲಿ ನಾವೆಲ್ಲರೂ ಪಾಪಿಗಳೇ." [25]ಈ ಸತ್ಯವನ್ನು ಮುಂದಿನ ಪಾಠದಲ್ಲಿ ವಿವರಿಸಲಾಗುವದು. [26]"ದಾವೀದನ ಮಗುವು ಅಸುನೀಗಿದಾಗ" ಎಂಬ ಹೆಚ್ಚಿನ ಲೇಖನವನ್ನು ನೋಡಿರಿ. [27]ಈಸಾರಿ ನಾತಾನನು *ಶುಭ* ಸಂದೇಶದೊಂದಿಗೆ ಬಂದನು. [28]2 ಸಮುವೇಲ 15:37ರಲ್ಲಿ ಹೊಷೈಯ "ದಾವೀದನ ಸ್ನೇಹಿತನು" ಎಂದು ನೋಡುತ್ತೇವೆ. [29]2 ಸಮುವೇಲ 17:27 ಮೆಫಿಬೋಷೇತನು ಇವನೊಂದಿಗಿದ್ದನು. [30]ಈ ಪ್ರಸಂಗವನ್ನು ನಾನು ಪ್ರಬೋಧಿಸುವಾಗ ಸಾಮಾನ್ಯವಾಗಿ ನಾನು ಮುಗುಳ್ನ ನಗುತ್ತಾ ಈ ಅಂಶವನ್ನು ತಿಳಿಸುತ್ತೇನೆ. "ಒಂದು ವೇಳೆ ಈ ವಿಷಯದಿಂದ ನೀವು ಬೇಸರವಾಗಿದ್ದರೆ ಈ ಸಭೆಯು, ಆ ಸಭೆಯಂತಿದೆ ಎನ್ನುವಾಗ ನೀವು ನಮ್ಮ ಭಾಗವಾಗಿದ್ದೀರಿ ಇದು ನಿಮ್ಮ ಜೀವಿತವನ್ನು ಆಶೀರ್ವದಿಸುತ್ತದೆ ಎಂದು ನಂಬುತ್ತೇನೆ."